ಲಿಖಿತ ಮೂಲಕ
ಉತ್ತರಿಸುವ ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೩೭

**ಪಟ್ಟಿ – ೦೫**

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತ ನಾಲ್ಕನೇ ಅಧಿವೇಶನ
ಸೋಮವಾರ, ದಿನಾಂಕ : ೧೯ನೇ ಫೆಬ್ರವರಿ, ೨೦೧೮

---

## ಸಮೂಹ – I

೧. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

೨. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

೩. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು.

೪. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

೫. ವೈದ್ಯಕೀಯ ಶಿಕ್ಷಣ ಸಚಿವರು.

೬. ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

೭. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು.

---

## ಕೆ.ಆರ್.ಇ.ಐ.ಎಸ್. ಶಾಲೆಗಳಲ್ಲಿ ಸಹ ಶಿಕ್ಷಕರಿಗೆ ೩೭೧(ಜೆ) ಮೀಸಲಾತಿಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೩೬೬ (೬೮೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕೆ.ಆರ್.ಇ.ಐ.ಎಸ್) ದ ಶಾಲೆಗಳಲ್ಲಿ ಸಹ ಶಿಕ್ಷಕರಿಗೆ ೩೭೧(ಜೆ) ಅಡಿಯಲ್ಲಿ ಮೀಸಲಾತಿ ಕಲ್ಪಿಸುವಲ್ಲಿ ಹಾಗೂ ಮುಂಬಡ್ತಿ ನೀಡುವಲ್ಲಿ ನಿಯಮಗಳನ್ನು ಪಾಲಿಸದೇ ವಿಳಂಬವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿವರ ನೀಡುವುದು;

(ಆ) ಈ ಸದರಿ ಶಿಕ್ಷಣ ಸಂಸ್ಥೆಯ ಶಾಲೆಗಳಲ್ಲಿ ಸಹ ಶಿಕ್ಷಕರಿಗೆ ೩೭೧(ಜೆ) ಅಡಿಯಲ್ಲಿ ಬಡ್ತಿ ನೀಡಲಾಗಿದೆಯೇ; ಇದ್ದರೆ, ಸ್ಥಳೀಯ ವೃಂದದ ಅಂತಿಮ ಜೇಷ್ಠತಾ ಪಟ್ಟಿ ನೀಡುವುದು;

(ಇ) ಮೇಲ್ಕಾಣಿಸಿದ ಸಮಸ್ಯೆಯನ್ನು ಬಗೆಹರಿಸಿ ನ್ಯಾಯಸಮ್ಮತ ೩೭೧(ಜೆ) ಅಡಿಯಲ್ಲಿ ಮೀಸಲಾತಿ ಹಾಗೂ ಮುಂಬಡ್ತಿಗಳನ್ನು ನೀಡಲು ಸರ್ಕಾರ ಮುಂದಾಗುವುದೇ; ಇದ್ದರೆ, ಸರ್ಕಾರದ ಮುಂದಿರುವ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಮುಖ್ಯಮಂತ್ರಿಯವರ ವಿವೇಚನಾ ನಿಧಿ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೩೬೭ (೬೭೮) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ (ಹೆಚ್.ಕೆ.ಆರ್.ಡಿ.ಬಿ) ಅಡಿಯಲ್ಲಿ ಮುಖ್ಯಮಂತ್ರಿ ವಿವೇಚನಾ ನಿಧಿ ಹಾಗೂ ಸರ್ಕಾರದ ವಿವೇಚನಾ ನಿಧಿ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ; ಇದ್ದರೆ, ವರ್ಷವಾರು, ಹಾಗೂ ಮೊತ್ತವಾರು ಪ್ರತ್ಯೇಕ ಮಾಹಿತಿ ನೀಡುವುದು;

(ಆ) ಸದರಿ ಮಂಡಳಿ ಅಡಿಯಲ್ಲಿ ಮುಖ್ಯಮಂತ್ರಿಯವರ ವಿವೇಚನಾ ನಿಧಿಯಡಿಯಲ್ಲಿ ಹಾಗೂ ಸರ್ಕಾರದ ವಿವೇಚನಾ ನಿಧಿಯಡಿಯಲ್ಲಿ ವಿಧಾನ ಪರಿಷತ್ ಸದಸ್ಯರಿಗೆ ಅನುದಾನ ನೀಡಲಾಗಿದೆಯೇ; ಇದ್ದರೆ, ವರ್ಷವಾರು, ವಿವೇಚನಾ ನಿಧಿವಾರು ಹಾಗೂ ಸದಸ್ಯರು ಪ್ರಸ್ತಾಪಿಸಿದ ಕಾಮಗಾರಿ ಮೊತ್ತವಾರು ಮಾಹಿತಿ ನೀಡುವುದು;

(ಇ) ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಆಸ್ತಿ ಎಷ್ಟು; ಸದರಿ ಆಸ್ತಿಗಳಿಂದ ಮಂಡಳಿಗೆ ಆಗುವ ಆದಾಯ ಎಷ್ಟು? (ವಿವರ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಆರ್ಥಿಕ ಪ್ರಗತಿ ಹಾಗೂ ಕಾಮಗಾರಿಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೩೬೮ (೬೭೯) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ (ಹೆಚ್.ಕೆ.ಆರ್.ಡಿ.ಬಿ.) ಇಲ್ಲಿಯವರೆಗೂ ಆದ ಆರ್ಥಿಕ ಪ್ರಗತಿ ಎಷ್ಟು; ವರ್ಷವಾರು, ಘೋಷಿಸಿದ ಅನುದಾನ, ಬಿಡುಗಡೆ ಮಾಡಿದ ಮೊತ್ತ ಹಾಗೂ ಖರ್ಚು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಮಂಡಳಿಯಲ್ಲಿ ಮಂಜೂರಾದ ಹಾಗೂ ಪೂರ್ಣಗೊಂಡ ಕಾಮಗಾರಿಗಳೆಷ್ಟು; (ವರ್ಷವಾರು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸದರಿ ಮಂಡಳಿಯ ಕಾಮಗಾರಿಗಳಲ್ಲಿ ಆರ್ಥಿಕ ಹಾಗೂ ಭೌತಿಕ ಪ್ರಗತಿಯಲ್ಲಿ ವಿಳಂಬವಾಗುತ್ತಿರಲು ಕಾರಣಗಳೇನು? (ವಿವರ ನೀಡುವುದು)

## ಹೈದರಾಬಾದ್–ಕರ್ನಾಟಕ ಭಾಗದಲ್ಲಿ KREIS ಸಂಸ್ಥೆಯಲ್ಲಿರುವ ಹುದ್ದೆಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೩೭೯ (೬೮೧) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಹೈದ್ರಾಬಾದ್–ಕರ್ನಾಟಕದ ೬ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (KREIS) ಅಡಿಯಲ್ಲಿ ಬರುವ ವಸತಿ ಶಾಲೆಗಳು ಎಷ್ಟು; (ವಸತಿ ಶಾಲೆಗಳ ಪಟ್ಟಿ ನೀಡುವುದು)

(ಆ) ಸದರಿ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ವಸತಿ ಶಾಲೆಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳ ಮಾಹಿತಿ ನೀಡುವುದು;

(ಇ) ಸದರಿ ಶಿಕ್ಷಣ ಸಂಸ್ಥೆಯುಡಿಯಲ್ಲಿರುವ ವಸತಿ ಶಾಲೆಗಳ ಪ್ರಾಂಶುಪಾಲರ ಹುದ್ದೆಗಳಿಗೆ ೩೭೧(ಜೆ) ಅಡಿಯಲ್ಲಿ ಮೀಸಲಾತಿ ಕಲ್ಪಿಸಲಾಗಿದೆಯೇ; ಇದ್ದರೆ ಸ್ಥಳೀಯ ವೃಂದದ (75%) (Regional Local Cadre) ಮತ್ತು ಉಳಿಕೆ ಮೂಲ ವೃಂದದ (25%) (Residual Parental Cadre) ಹುದ್ದೆಗಳೆಂದು ವಿಂಗಡಿಸಲಾದ ನೇರ ನೇಮಕಾತಿ ಹಾಗೂ ಬಡ್ತಿ ಮಾಹಿತಿ ನೀಡುವುದು?

## ಮಧುಮೇಹ ಖಾಯಿಲೆಗೆ ಸಂಬಂಧಿಸಿದ ಔಷಧಿಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೭೦ (೪೩೫) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಧುಮೇಹ ಖಾಯಿಲೆಗೆ ಸಂಬಂಧಿಸಿದಂತೆ ಔಷಧಿ ಅಂಗಡಿಗಳಲ್ಲಿ ದೊರಕುವ ಉತ್ತಮ ಗುಣಮಟ್ಟದ ಔಷಧಿಗಳಾವುವು; (ವಿವರ ನೀಡುವುದು)

(ಆ) ಸಾರ್ವಜನಿಕರಿಗೆ ಮಧುಮೇಹ ಖಾಯಿಲೆಗೆ ಸಂಬಂಧಿಸಿದ ಔಷಧಿಗಳು ಪ್ರಸ್ತುತ ಯಾವ ದರದಲ್ಲಿ ದೊರಕುತ್ತಿವೆ; (ವಿವರ ನೀಡುವುದು)

(ಇ) ಮಧುಮೇಹ ಖಾಯಿಲೆಗೆ ಸಂಬಂಧಿಸಿದ ಔಷಧಿಗಳ ದರ ಇಳಿಕೆ ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; (ವಿವರ ನೀಡುವುದು)

(ಈ) ಸಾರ್ವಜನಿಕರಿಗೆ ಮಧುಮೇಹ ಖಾಯಿಲೆಗೆ ಸಂಬಂಧಿಸಿದ ಔಷಧಿಗಳ ದರಗಳು ಅತೀ ದುಬಾರಿಯಾಗಿರುವುದರಿಂದ, ರಿಯಾಯಿತಿ ದರದಲ್ಲಿ ಈ ಔಷಧಿಗಳು ದೊರಕುವಂತೆ ಮಾಡಲು ಸರ್ಕಾರ ಚಿಂತಿಸುವುದೆ; ಹಾಗಿದ್ದಲ್ಲಿ, ವಿವರ ನೀಡುವುದು?

## ಪ್ರವಾಸೋದ್ಯಮ ಇಲಾಖೆಯಡಿ ಕೈಗೊಂಡ ಕಾಮಗಾರಿಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೭೧ (೪೩೧) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ೪ ವರ್ಷಗಳಲ್ಲಿ ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು;

(ಆ) ಸದರಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಇದುವರೆವಿಗೂ ಬಾಕಿ ಉಳಿದಿರುವ ಕಾಮಗಾರಿಗಳ ಸಂಖ್ಯೆ ಎಷ್ಟು; ಹಾಗೂ ಪೂರ್ಣಗೊಂಡ ಕಾಮಗಾರಿಗಳು ಎಷ್ಟು; ಮತ್ತು ಅವು ಯಾವುವು? (ತಾಲ್ಲೂಕುವಾರು ವಿವರ ನೀಡುವುದು)

## ಕೊಪ್ಪ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೭೨ (೪೩೨) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮದ್ದೂರು ತಾಲ್ಲೂಕು ಕೊಪ್ಪ ಹೋಬಳಿ, ಕೊಪ್ಪ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲಾಗಿದೆಯೇ;

(ಆ) ಮೇಲ್ದರ್ಜೆಗೇರಿಸಲಾಗಿದ್ದಲ್ಲಿ ಅವಶ್ಯಕತೆ ಇರುವ ಮೂಲ ಸೌಲಭ್ಯಗಳನ್ನು ಒದಗಿಸಲಾಗಿದೆಯೇ; (ವಿವರ ನಿಡುವುದು)

(ಇ) ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಹುದ್ದೆವಾರು ವಿವರ ನೀಡುವುದು)

(ಈ) ಪ್ರಸ್ತುತ ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಉ) ಸಾರ್ವಜನಿಕರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡಲಾಗುತ್ತಿದೆಯೇ; ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

# ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾಗಿರುವ ಕೊಳವೆ ಬಾವಿಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೭೩(೪೩೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಗಳಿಂದ ಎಷ್ಟು ಕೊಳವೆ ಬಾವಿಗಳನ್ನು ಮಂಜೂರು ಮಾಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಅವುಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ; ಇನ್ನೂ ಕೊರೆಯಬೇಕಾಗಿರುವ ಕೊಳವೆ ಬಾವಿಗಳೆಷ್ಟು;

(ಇ) ಕೊರೆದಿರುವ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ; ಇನ್ನೂ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕಾಗಿದೆ;

(ಈ) ಕೊರೆದಿರುವ ಎಷ್ಟು ಕೊಳವೆಬಾವಿಗಳಿಗೆ ಪಂಪು ಮೋಟಾರ್‌ಗಳನ್ನು ಅಳವಡಿಸಲಾಗಿದೆ; ಇನ್ನೂ ಪಂಪು ಮೋಟಾರ್‌ಗಳನ್ನು ಅಳವಡಿಸಬೇಕಾಗಿರುವ ಕೊಳವೆ ಬಾವಿಗಳೆಷ್ಟು; ಪಂಪು ಮೋಟಾರು ಮತ್ತು ವಿದ್ಯುತ್ ಸಂಪರ್ಕಗಳನ್ನು ಕಲ್ಪಿಸದಿರಲು ಕಾರಣವೇನು;

(ಉ) ಪಂಪು ಮೋಟಾರ್ ಮತ್ತು ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು; ಯಾವ ಕಾಲಮಿತಿಯಲ್ಲಿ ಕಲ್ಪಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)

## ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು):–**

೩೭೪ (೬೭೨) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ APL ಮತ್ತು BPL ಕಾರ್ಡುಗಳನ್ನು ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಇದುವರೆವಿಗೂ ನೀಡಿರುವ ಜಿಲ್ಲಾವಾರು ಕಾರ್ಡ್‌ಗಳ ಮಾಹಿತಿ ನೀಡುವುದು;

(ಆ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕಳೆದ ನಾಲ್ಕು ವರ್ಷಗಳಿಂದ ಸದರಿ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ವರ್ಷವಾರು ಮಾಹಿತಿ ನೀಡುವುದು)

(ಇ) ಯಾವ ಯಾವ ಯೋಜನೆಗಳಿಗೆ ಸದರಿ ಅನುದಾನವನ್ನು ಬಳಸಿಕೊಳ್ಳಲಾಗಿದೆ? (ಯೋಜನಾವಾರು, ವರ್ಷವಾರು ಮಾಹಿತಿ ನೀಡುವುದು)

## ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೩೭೫ (೬೭೩) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ನಾಲ್ಕು ವರ್ಷಗಳಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇಲಾಖೆಗೆ ಬಿಡುಗಡೆ ಮಾಡಿದ ಅನದಾನವೆಷ್ಟು; (ವರ್ಷವಾರು ಮಾಹಿತಿ ನೀಡುವುದು)

(ಆ) ಬಿಡುಗಡೆಯಾದ ಅನುದಾನವನ್ನು ಯಾವ ಯಾವ ಉದ್ದೇಶಗಳಿಗೆ ಬಳಸಲಾಗಿದೆ; (ವಿವರ ನೀಡುವುದು)

(ಇ) ಉಳಿಕೆಯಾಗಿರುವ ಅನುದಾನವೆಷ್ಟು; (ವರ್ಷವಾರು ಮಾಹಿತಿ ನೀಡುವುದು)

(ಈ) ಉಳಿದಿರುವ ಅನುದಾನವನ್ನು ಬಳಸಿಕೊಳ್ಳಲು ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ಅಡುಗೆ ಸಿಬ್ಬಂದಿ ನೇಮಕಾತಿ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೩೭೬ (೭೮೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖೆಯಡಿ ಬರುವ ವಸತಿ ನಿಲಯಗಳಲ್ಲಿ ಅಡುಗೆ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು;

(ಆ) ಈ ಹಿಂದೆ ಇವರುಗಳ ನೇಮಕಾತಿಗೆ ಯಾವ ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿತ್ತು; ಈ ವಿದ್ಯಾರ್ಹತೆಯಿಂದ ಆಗಿರುವ ತೊಂದರೆಗಳೇನು;

(ಇ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯವರು ಈ ಹುದ್ದೆಗಳಿಗೆ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ನಿಗಧಿ ಪಡಿಸಿರಲು ಕಾರಣಗಳೇನು ;

(ಈ) ಈ ಅವೈಜ್ಞಾನಿಕವಾಗಿ ನಿಗಧಿಪಡಿಸಿದ ವಿದ್ಯಾರ್ಹತೆಯಿಂದ ಎಸ್.ಎಸ್.ಎಲ್.ಸಿ. ಮಾಡಿದ ಅನೇಕ ನುರಿತ, ಅನುಭವಿ, ಅಡುಗೆ ಪ್ರವೀಣರು ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ವಿದ್ಯಾರ್ಹತೆಯುನ್ನು ತೆಗೆದುಹಾಕುವ ಬಗ್ಗೆ ಸರ್ಕಾರ ಮರು ಚಿಂತಿಸುವುದೇ ?

## ಉಪ್ಪಾರ ಸಮಾಜವನ್ನು ಪರಿಶಿಷ್ಠ ಪಂಗಡಕ್ಕೆ ಸೇರಿಸುವ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೩೭೭ (೬೯೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಉಪ್ಪಾರ ಸಮಾಜದ ಜನಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಉಪ್ಪಾರರ ಸಮಾಜವನ್ನು ಪರಿಶಿಷ್ಠ ಪಂಗಡಕ್ಕೆ ಸೇರಿಸುವ ಸಂಬಂಧ ಇಲ್ಲಿಯವರೆಗೂ ಎಷ್ಟು ಹೋರಾಟಗಳು ನಡೆದಿವೆ; (ವಿವರವಾದ ಮಾಹಿತಿ ನೀಡುವುದು)

(ಇ) ಉಪ್ಪಾರ ಸಮಾಜವನ್ನು ಪರಿಶಿಷ್ಠ ಪಂಗಡಕ್ಕೆ ಸೇರಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

(ಈ) ಯಾವ ಕಾಲಮಿತಿಯೊಳಗೆ ಉಪ್ಪಾರ ಸಮಾಜವನ್ನು ಪರಿಶಿಷ್ಠ ಪಂಗಡಕ್ಕೆ ಸೇರಿಸಿ ಅದೇಶ ಹೊರಡಿಸಲಾಗುವುದು?

## ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಾಹಿತಿ ಕುರಿತು

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳಿಯ ಸಂಸ್ಥೆಗಳ ಕ್ಷೇತ್ರ):–**

೩೭೮ (೭೨೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ; ಇಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು; ವೈದ್ಯರು ರೋಗಿಗಳಿಗೆ ಚಿಕಿತ್ಸೆಗಾಗಿ ಎಲ್ಲಾ ಸಮಯದಲ್ಲಿ ಲಭ್ಯ ಇರುವ ಬಗ್ಗೆ ಮಾಹಿತಿ ನೀಡುವುದು;

(ಆ) ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರ್ಕಾರವು ಕಳೆದ ೫ ವರ್ಷಗಳಲ್ಲಿ ನೀಡಿದ ಅನುದಾನ ಎಷ್ಟು; ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲಾಗಿದೆಯೇ; (ವಿವರ ನೀಡುವುದು)

(ಇ) ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಉನ್ನತೀಕರಿಸಲು ಸರ್ಕಾರ ಯಾವ ಯೋಜನೆಗಳನ್ನು ಹಾಕಿಕೊಂಡಿದೆ ಮತ್ತು ಅದಕ್ಕೆ ನಿಗಧಿ ಪಡಿಸಿದ ಅನುದಾನ ಎಷ್ಟು; ಇದಕ್ಕೆ ರಾಜ್ಯ ಮತ್ತು ಕೇಂದ್ರದ ಪಾಲು ಎಷ್ಟು? (ಪ್ರಾಥಮಿಕ ಆರೋಗ್ಯ ಕೇಂದ್ರವಾರು ವಿವರ ನೀಡುವುದು)

## ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ ವಸತಿ ನಿಲಯಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳಿಯ ಸಂಸ್ಥೆಗಳ ಕ್ಷೇತ್ರ):–**

೩೭೭ (೭೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ವಸತಿ ನಿಲಯಗಳು ಹಾಗೂ ವಸತಿ ಶಾಲೆಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳು ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮೂಲಭೂತ ಸೌಲಭ್ಯಗಳೊಂದಿಗೆ ಅವುಗಳ ಸ್ವಚ್ಛತೆ ಮತತು ದುರಸ್ತಿ ಕಾರ್ಯಗಳನ್ನು ಯಾವಾಗ ಮಾಡಲಾಗುವುದು; (ವಿವರ ನೀಡುವುದು)

(ಆ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಡಿ ಬರುವ ಒಟ್ಟು ವಸತಿ ನಿಲಯಗಳು

ಮತ್ತು ವಸತಿ ಶಾಲೆಗಳ ಸಂಖ್ಯೆ ಎಷ್ಟು; (ಶಾಲೆ ಮತ್ತು ವಸತಿ ನಿಲಯಗಳ ಹೆಸರು ಮತ್ತು ದೂರವಾಣಿ ಸಂಖ್ಯೆ ಸಮೇತ ವಿವರ ನೀಡುವುದು)

(ಇ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ ವಸತಿ ನಿಲಯಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಅವಶ್ಯಕತೆಗೆ ತಕ್ಕಂತೆ ಶೌಚಾಲಯ, ಸ್ನಾನದ ಗೃಹ, ಓದುವ ಟೇಬಲ್ ಮತ್ತು ಚೇರ್, ಮಂಚ, ಹಾಸಿಗೆ ಮುಂತಾದ ಮೂಲಭೂತ ಸೌಲಭ್ಯಗಳೊಂದಿಗೆ ಗುಣಮಟ್ಟದ ಆಹಾರ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)

(ಈ) ೨೦೧೪–೧೫, ೨೦೧೫–೧೬, ೨೦೧೬–೧೭ನೇ ಸಾಲಿನಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗೆ ಸರ್ಕಾರ ಸದರಿ ಸೌಲಭ್ಯಗಳಿಗೆ ಒದಗಿಸಿದ ಅನುದಾನವೆಷ್ಟು; ಅದರಲ್ಲಿ ಬಳಕೆಯಾದ ಅನುದಾನವೆಷ್ಟು; ಬಾಕಿ ಉಳಿದ ಅನುದಾನವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಉ) ಈ ಅನುದಾನ ಬಳಕೆಯಾಗದೆ ಉಳಿಯಲು ಕಾರಣವೇನು? (ಮಾಹಿತಿ ನೀಡುವುದು)

## ವಿಶೇಷ ಘಟಕ ಯೋಜನೆಯ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೮೦ (೬೩೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖೆಯು ವಿಶೇಷ ಘಟಕ ಯೋಜನೆಯಡಿಯಲ್ಲಿ ಕಳೆದ ೩ ವರ್ಷಗಳಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು/ ಯೋಜನೆಗಳು ಯಾವುವು; (ವಿವರ ನೀಡುವುದು)

(ಆ) ಇದಕ್ಕಾಗಿ ಈ ಅವಧಿಯಲ್ಲಿ ಪ್ರತಿ ವರ್ಷ ಈ ಜಿಲ್ಲೆಗಳಿಗೆ ವೆಚ್ಚ ಮಾಡಲಾಗಿರುವ ಹಣವೆಷ್ಟು; ಸಿ.ಸಿ. ರಸ್ತೆ, ಸಮುದಾಯ ಭವನಗಳ ನಿರ್ಮಾಣ ಮತ್ತು ವೈಯುಕ್ತಿಕ ಸೌಲಭ್ಯ ವಿವರ ನೀಡುವುದು?

## ತಾಲ್ಲೂಕು ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸಾ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ

**ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು):–**

೩೮೧ (೬೬೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿರುವ ತಾಲ್ಲೂಕು ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸಾ ಘಟಕಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ಮಾನ್ವಿ ಪಟ್ಟಣದಲ್ಲಿ ಎಂ.ಸಿ. ಎಚ್. ಆಸ್ಪತ್ರೆ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಸದರಿ ಎಂ.ಸಿ.ಎಚ್. ಆಸ್ಪತ್ರೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

(ಇ) ರಾಯಚೂರು ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ ನೀಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ರಾಯಚೂರುನಲ್ಲಿರುವ ರಾಜೀವ ಗಾಂಧಿ ಸೂಪರ್ ಸ್ಪೆಷಲಿಸ್ಟ್ ಆಸ್ಪತ್ರೆ ಬಗ್ಗೆ

**ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು):–**

೩೮೨ (೬೬೪) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರುನಲ್ಲಿರುವ ರಾಜೀವ ಗಾಂಧಿ ಸೂಪರ್ ಸ್ಪೆಷಲಿಸ್ಟ್ ಆಸ್ಪತ್ರೆಯಲ್ಲಿ ಸಿಬ್ಬಂದಿಗಳ ನೇಮಕಾತಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ರಾಜೀವ್ ಗಾಂಧಿ ಸೂಪರ್ ಸ್ಪೆಷಲಿಸ್ಟ್ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ಘಟಕ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ರಾಯಚೂರುನಲ್ಲಿರುವ ಒಪೆಕ (OPEC) ಆಸ್ಪತ್ರೆಯ ಹೊರಭಾಗದಲ್ಲಿರುವ ಪ್ರದೇಶವನ್ನು (ಉದ್ಯಾನವನ, ವಿದ್ಯುತ್ ದ್ವೀಪಗಳ) ಅಭಿವೃದ್ಧಿ ಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ೨೦೧೬–೧೭ನೇ ಸಾಲಿನ ಆಯವ್ಯಯದಲ್ಲಿ (OPEC) ಆಸ್ಪತ್ರೆಗೆ ಸರ್ಕಾರ ನೀಡಿರುವ ೩೫ ಕೋಟಿ ರೂಪಾಯಿಗಳ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ರಾಯಚೂರುನಲ್ಲಿರುವ ಪ್ರಾಚೀನ ಕೋಟೆ ಅಭಿವೃದ್ಧಿ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೩೮೩ (೬೬೬) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೭-೧೮ನೇ ಸಾಲಿನಲ್ಲಿ ಹೈದರಾಬಾದ್ ಕರ್ನಾಟಕ (ಹೈ-ಕ) ಪ್ರದೇಶಗಳಿಗೆ ನೀಡಿರುವ ಅನುದಾನ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಯಚೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿ ಮಾಡಲು ಕೈಗೆತ್ತಿಕೊಂಡಿರುವ ಪ್ರದೇಶಗಳು ಯಾವುವು;

(ಇ) ರಾಯಚೂರುನಲ್ಲಿರುವ ಪ್ರಾಚೀನ ಕೋಟೆ ಅಭಿವೃದ್ಧಿ ಮಾಡಲು ಸರ್ಕಾರದಿಂದ ಮಂಜೂರಾಗಿರುವ ೪.೫ ಕೋಟಿ ರೂಪಾಯಿಗಳ ಅನುದಾನವನ್ನು ಇಲ್ಲಿಯವರೆಗೆ ಖರ್ಚು ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪ್ರಾಚೀನ ಕೋಟೆ ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ರಾಯಚೂರು ಜಿಲ್ಲೆಗೆ ಮಂಜೂರಾಗಿರುವ ವಸತಿ ಶಾಲೆಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೩೮೪ (೬೬೫) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೭-೧೮ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ರಾಯಚೂರು ಜಿಲ್ಲೆಗೆ ಮಂಜೂರಾಗಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಮಂಜೂರಾಗಿರುವ ವಸತಿ ಶಾಲೆಗಳಿಗೆ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ರಾಜ್ಯದಲ್ಲಿ ಹಿಂದುಳಿದ ವರ್ಗದ ಪತ್ರಕರ್ತರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಯಾವುದಾದರೂ ಸೌಲಭ್ಯಗಳನ್ನು ಒದಗಿಸಲಾಗಿದೆಯೇ; ಹಾಗಿದ್ದಲ್ಲಿ, ಆ ಸೌಲಭ್ಯಗಳು ಯಾವುವು?

## ಹೈದ್ರಾಬಾದ್–ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಿಗೆ ನೀಡಿರುವ ಅನುದಾನದ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು):–**

೩೮೫ (೬೬೭) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪ನೇ ಸಾಲಿನಿಂದ ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಇಲ್ಲಿವರೆಗೂ ಆರು ಜಿಲ್ಲೆಗಳಿಗೆ ನೀಡಿರುವ ಅನುದಾನ ಎಷ್ಟು ; ಕೈಗೆತ್ತಿಕೊಂಡಿರುವ ಕಾಮಗಾರಿಗಳು ಎಷ್ಟು ;

(ಆ) ೨೦೧೭–೧೮ನೇ ಸಾಲಿನಲ್ಲಿ ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಮ್ಯಾಕ್ರೋ (Macro) ಯೋಜನೆಯಲ್ಲಿ ಆರು ಜಿಲ್ಲೆಗಳಿಗೆ ನೀಡಿರುವ ಅನುದಾನ ಎಷ್ಟು; ಈ ಯೋಜನೆಯಲ್ಲಿ ರಾಯಚೂರು ಜಿಲ್ಲೆಗೆ ಮಂಜೂರಾದ ಅನುದಾನ ಎಷ್ಟು ? (ವಿವರ ನೀಡುವುದು)

## ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದ ಬಾದಾಮಿ ಹೌಸ್ ತೆರವುಗೊಳಿಸುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೩೮೬ (೬೮೯) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದ (ಕೆ.ಎಸ್.ಟಿ.ಡಿ.ಸಿ) ಕೇಂದ್ರ ಕಛೇರಿ ಯಾವುದು ; ಹಾಗೂ ಬಾದಾಮಿ ಹೌಸ್ ಬುಕ್ಕಿಂಗ್ ಕಛೇರಿಗಳನ್ನು ಎಲ್ಲಿಗೆ ಸ್ಥಳಾಂತರಿಸಲಾಗಿದೆ ; ಸ್ಥಳಾಂತರಿಸಲು ಕಾರಣಗಳೇನು ;

(ಆ) ಬಾದಾಮಿ ಹೌಸ್ ಬುಕ್ಕಿಂಗ್ ಕಛೇರಿಯನ್ನು ಸರ್ಕಾರ ಯಾವಾಗ ವಶಕ್ಕೆ ಪಡೆಯಲಾಗಿರುತ್ತದೆ ; ಮತ್ತು ಯಾವಾಗ ಬೇರೆಯವರಿಗೆ ಬಿಟ್ಟುಕೊಡಲಾಗಿರುತ್ತದೆ ; ಬಿಟ್ಟುಕೊಡಲು ಕಾರಣಗಳೇನು ; (ವಿವರವಾದ ಮಾಹಿತಿ ನೀಡುವುದು)

(ಇ) ಬಾದಾಮಿ ಹೌಸ್ ಬುಕ್ಕಿಂಗ್ ಕಛೇರಿಯನ್ನು ತೆರವುಗೊಳಿಸುವ ಸಂಬಂಧ ಯಾವ ನ್ಯಾಯಾಲಯದಲ್ಲಿ ಆದೇಶವಾಗಿತ್ತು ; ಸದರಿ ಆದೇಶ ಹಿನ್ನೆಲೆಯಲ್ಲಿ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸದಿರಲು ಕಾರಣಗಳೇನು ;

(ಈ) ಮೇಲ್ಮನವಿಗೆ ಈ ಮೊಕದ್ದಮೆಯು ಅರ್ಹ/ಅನರ್ಹವಾಗಿರುವುದಿಲ್ಲ ಎಂಬುದರ ಬಗ್ಗೆ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆಯಲಾಗಿತ್ತೆ ; ಪಡೆಯದಿರಲು ಕಾರಣಗಳೇನು ;

(ಉ) ಸರ್ಕಾರ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಯಾವ ಕ್ರಮ ತೆಗೆದುಕೊಂಡಿದೆ ? (ವಿವರವಾದ ಮಾಹಿತಿಯನ್ನು ನೀಡುವುದು)

## ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಅಗತ್ಯವಿರುವ ಕ್ರಿಯಾ ಯೋಜನೆಯ ಅನುಷ್ಠಾನದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೩೮೭ (೪೭೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಚೈಲ್ಡ್ ರೈಟ್ಸ್ ಟ್ರಸ್ಟ್‌ನವರು ಮಧ್ಯಪ್ರದೇಶದ ಕಕ್ಷಿದಾರರಾಗಿ ಸಲ್ಲಿಸಿದ್ದ ಪ್ರಕರಣವನ್ನು ಇತ್ಯರ್ಥ ಮಾಡಿರುವ ಸರ್ವೋಚ್ಚ ನ್ಯಾಯಾಲಯವು ಮದುವೆಯ ಸಂಬಂಧದಲ್ಲಿ ೧೫ ರಿಂದ ೧೮ ವರ್ಷದವರೊಡನೆಯೂ ನಡೆಸುವ ಲೈಂಗಿಕ ಚಟುವಟಿಕೆಯನ್ನು ಅತ್ಯಾಚಾರ ಎಂದು ಪರಿಗಣಿಸಿರುವುದನ್ನು ಕರ್ನಾಟಕ ಸರ್ಕಾರವು ಗಮನಕ್ಕೆ ತೆಗೆದುಕೊಂಡಿದೆಯೆ ;

(ಆ) ಹಾಗಿದ್ದಲ್ಲಿ, ಈ ನಿರ್ದೇಶನದಂತೆ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಅಗತ್ಯವಿರುವ ಕ್ರಿಯಾ ಯೋಜನೆಯನ್ನು ಸರ್ಕಾರದ ಕಾನೂನು ಇಲಾಖೆ, ಗೃಹ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ರೂಪಿಸಿವೆಯೇ ; (ವಿವರ ನೀಡುವುದು)

(ಇ) ಸರ್ವೋಚ್ಚ ನ್ಯಾಯಾಲಯದ ಈ ನಿರ್ದೇಶನವನ್ನು ಜಾರಿಗೆ ತಂದಾಗ, ಮಕ್ಕಳ ಮೇಲಿನ ಲೈಂಗಿಕ ಅತ್ಯಾಚಾರದ ಪ್ರಕರಣಗಳು ಹೆಚ್ಚಾಗಲಿದ್ದು, ಅವುಗಳನ್ನು ನಿರ್ವಹಿಸಲು ಇಲಾಖೆಗಳು ಮತ್ತು ನ್ಯಾಯಾಲಯಗಳು ಮಾಡಿಕೊಂಡಿರುವ ಸಿದ್ಧತೆಗಳೇನು ?

## ಬಡ ಕುಟುಂಬಗಳಿಗೆ ಹಂಚಿಕೆಯಾಗಬೇಕಿದ್ದ ಪಡಿತರ ಧಾನ್ಯ ಗೋದಾಮಿನಲ್ಲೇ ಕೊಳೆಯುವಂತಾಗುತ್ತಿರುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್** (ಶಿಕ್ಷಕರ ಕ್ಷೇತ್ರ):–

೩೮೮ (೪೬೯) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಕಳೆದ ೩ ವರ್ಷಗಳಲ್ಲಿ ಪಡಿತರ ಹಂಚಿಕೆಗಾಗಿ ಎಷ್ಟು ಪ್ರಮಾಣದ ದವಸ–ಧಾನ್ಯಗಳನ್ನು ಬಿಡುಗಡೆ ಮಾಡಲಾಗಿದೆ ;

(ಆ) ಬಿಡುಗಡೆಯಾದ ಒಟ್ಟು ಧಾನ್ಯದಲ್ಲಿ ಎಷ್ಟು ಪ್ರಮಾಣವನ್ನು ಹಂಚಿಕೆ ಮಾಡಲಾಗಿದೆ ; ಮತ್ತು ಬಾಕಿ ಉಳಿದಿರುವ ಒಟ್ಟು ಪ್ರಮಾಣವೆಷ್ಟು;

(ಇ) ದಿನಾಂಕ : ೦೭-೦೧-೨೦೧೮ರ ಪತ್ರಿಕೆಯಲ್ಲಿ ಸುಮಾರು ೨೫ ಸಾವಿರ ಕ್ವಿಂಟಾಲ್ ಪಡಿತರ ಧಾನ್ಯ "ಹುಳು ಪಾಲು" ಹಾಗೂ ರೂ.೧೨ ಕೋಟಿ ಮೌಲ್ಯದ ಆಹಾರ ಹಾಳು ಎಂದು ಪ್ರಕಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ಹಾನಿಗೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಹಾಗೂ ಇವರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಮಾತೃಪೂರ್ಣ ಯೋಜನೆಯ ಅನುಷ್ಠಾನದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೩೮೯ (೪೭೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ವಿಷನ್ ಸಹಯೋಗದಲ್ಲಿ ರಾಜ್ಯ ಸರ್ಕಾರ ರೂಪಿಸಿರುವ ಮಾತೃಪೂರ್ಣ ಯೋಜನೆಗೆ ಅನುಮೋದನೆ ದೊರಕಿದೆಯೇ ;

(ಆ) ಈ ಯೋಜನೆಗೆ ಹಂಚಿಕೆಯಾದ ಒಟ್ಟು ಹಣವೆಷ್ಟು ; (ಈ ಯೋಜನೆಯ ಅನುಷ್ಠಾನದ ರೂಪುರೇಷೆಗಳ ಬಗ್ಗೆ ವಿವರ ನೀಡುವುದು)

(ಇ) ಗರ್ಭಿಣಿಯರಿಗೆ Micro Nutrient Granule ಔಷಧಿ ವೈದ್ಯರ ಶಿಫಾರಸ್ಸಿನಂತೆ ಪೂರೈಸುವ ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ ;

(ಈ) ಈ ಯೋಜನೆಯ ಟೆಂಡರ್ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದು ಪತ್ರಿಕೆಯಲ್ಲಿ ವರದಿಯಾಗಿದ್ದು, ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?

## ರಾಜ್ಯದಲ್ಲಿ ಅಂಗಾಂಗ ದಾನದ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೩೯೦ (೪೭೦) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅಂಗಾಂಗ ದಾನದ ಕುರಿತು ಲಭ್ಯವಿರುವ ಕಾನೂನುಗಳು ಯಾವುವು ; (ವಿವರ ಹಾಗೂ ಲಭ್ಯವಿರುವ ಕಾನೂನಿನ ಪ್ರತಿಯನ್ನು ನೀಡುವುದು)

(ಆ) ರಾಜ್ಯದಲ್ಲಿ ಅಂಗಾಂಗಳ ಅವಶ್ಯಕತೆ ಇರುವ ವ್ಯಕ್ತಿಗಳ "ಡೇಟಾಬೇಸ್" ಸಿದ್ಧಪಡಿಸಲಾಗಿದೆಯೇ ; ಸಿದ್ಧಪಡಿಸಿದ್ದಲ್ಲಿ, ಅನುಸರಿಸಬೇಕಾದ ವಿವರಗಳನ್ನು ನೀಡುವುದು ;

(ಇ) ಅಪಘಾತದ ಸಂದರ್ಭದಲ್ಲಿ "ಮಿದುಳು ನಿಷ್ಕ್ರಿಯ" (Brain Dead) ಗೊಂಡ ವ್ಯಕ್ತಿಗಳಿಂದ ಅಂಗಾಂಗಳನ್ನು ಪಡೆಯಲು ಅನುಸರಿಸಬೇಕಾದ ಕಾನೂನುಗಳು ಹಾಗೂ ಪ್ರಕ್ರಿಯೆಗಳ ಕುರಿತಾದ ವಿವರ ಒದಗಿಸುವುದು;

(ಈ) ಅಪಘಾತದಲ್ಲಿ ನಿಷ್ಕ್ರಿಯ ಮಿದುಳಿನ ವ್ಯಕ್ತಿಗಳ ಅಂಗಾಂಗಗಳನ್ನು ಪಡೆಯುವಲ್ಲಿ ಹಾಗೂ ಪೋಸ್ಟ್‌ಮಾರ್ಟಮ್ ಸಂದರ್ಭದಲ್ಲಿ ಉದ್ಭವಿಸಬಹುದಾದ ತೊಂದರೆಗಳನ್ನು ನಿವಾರಿಸಲು ಅಗತ್ಯವಾಗಿರುವ ಕಾನೂನುಗಳನ್ನು ರಚಿಸಲಾಗಿದೆಯೇ ? (ವಿವರ ನೀಡುವುದು)

## ರಾಜೀವ್ ಗಾಂಧಿ ಆರೋಗ್ಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯದ ಉಪ ಕುಲಪತಿಗಳ ಹುದ್ದೆ ಖಾಲಿಯಿರುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೩೯೧ (೪೭೨) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜೀವ್ ಗಾಂಧಿ ಆರೋಗ್ಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯದ ಉಪ ಕುಲಪತಿಗಳ ಹುದ್ದೆ ಎಷ್ಟು ಸಮಯದಿಂದ ಖಾಲಿ ಉಳಿದಿದೆ;

(ಆ) ತಾತ್ಕಾಲಿಕ ಉಪ ಕುಲಪತಿಗಳನ್ನು ಬಹಳ ಸಮಯದವರೆಗೆ ಮುಂದುವರೆಸುವುದರಿಂದ ಅವರಿಗೆ ಸಂಪೂರ್ಣ ಅಧಿಕಾರ ಇಲ್ಲದಿರುವುದರಿಂದ ಆಡಳಿತದ ಮೇಲೆ ಪ್ರತಿಕೂಲ ಪರಿಣಾಮವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಉಪ ಕುಲಪತಿಗಳ ನೇಮಕಕ್ಕೆ ಸರ್ಚ್ ಕಮಿಟಿಯನ್ನು ರಚಿಸಿದ್ದು, ಅದು ತನ್ನ ವರದಿಯನ್ನು ಕೊಟ್ಟು ಹಲವಾರು ತಿಂಗಳು ಕಳೆದಿದ್ದರೂ, ಉಪ ಕುಲಪತಿಗಳ ನೇಮಕಾತಿ ವಿಳಂಬಕ್ಕೆ ಕಾರಣವೇನು ;

(ಈ) ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರ ಯಾವ ಕಾಲಮಿತಿಯಲ್ಲಿ ಉಪ ಕುಲಪತಿಗಳ ನೇಮಕಾತಿಯನ್ನು ಪೂರ್ಣಗೊಳಿಸುವುದು ?

## ಗಂಗಾ ಕಲ್ಯಾಣ ಯೋಜನೆ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೯೨ (೬೦೫) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಹಾಸನ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಲ್ಲಿ ಎಸ್ಸಿ/ಎಸ್‌ಟಿ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿ ೨೦೧೫–೧೬, ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ಫಲಾನುಭವಿಗಳ ಹೆಸರಿನೊಂದಿಗೆ ವಿವರ ಒದಗಿಸುವುದು)

(ಆ) ಸದರಿ ಯೋಜನೆಯಡಿ ೨೦೧೫–೧೬, ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; ಹಾಗೂ ಕೊರೆಯಲು ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಸದರಿ ಯೋಜನೆಯಡಿ ೨೦೧೫–೧೬, ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಕೊರೆಯಲಾದ ಕೊಳವೆ ಬಾವಿಗಳಲ್ಲಿ ಎಷ್ಟು ಕಾರ್ಯ ನಿರ್ವಹಿಸುತ್ತಿವೆ ? (ವಿವರ ನೀಡುವುದು)

## ಕುಣಬಿ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೯೩ (೪೪೧) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯ ದಟ್ಟ ಕಾಡುಗಳಲ್ಲಿ ವಾಸಿಸುವ ಕುಣಬಿ ಜನಾಂಗದವರು ಸಾಮಾಜಿಕವಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದವರಾಗಿದ್ದು, ತನ್ನದೇ ಆದ ಸಂಸ್ಕೃತಿ ಹೊಂದಿದವರಾಗಿದ್ದು, ಬುಡಕಟ್ಟು ಸಂಸ್ಕೃತಿಯ ಎಲ್ಲಾ ಗುಣಲಕ್ಷಣಗಳನ್ನು ಹೊಂದಿದ್ದು, ಕಳೆದ ಹಲವಾರು ವರ್ಷಗಳಿಂದ ಕುಣಬಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಒತ್ತಾಯಿಸುತ್ತಾ ಬಂದಿದ್ದರೂ, ಇಲ್ಲಿಯವರೆಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿರುವುದಿಲ್ಲದಿರುವುದರಿಂದ ಈ ಕುರಿತು ಸರ್ಕಾರ ಗಮನಹರಸಿ ಅವರ ಬೇಡಿಕೆಗೆ ಅನುಗುಣವಾಗಿ ಅನುಕೂಲ ಮಾಡಿಕೊಡುವುದೇ ; (ವಿವರ ನೀಡುವುದು)

(ಆ) ಇಲ್ಲಿಯವರೆಗೆ ಸದರಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸದಿರಲು ಕಾರಣವೇನು ; ಸದರಿ ವಿಷಯದಲ್ಲಿ ಕುಲಪತಿಗಳಿಂದ ಅಧ್ಯಯನ ನಡೆಸಿ ವರದಿ ನೀಡುತ್ತೇನೆಂದು ತಿಳಿಸಿದ್ದು, ಇಲ್ಲಿಯವರೆಗೆ ಯಾವುದೇ ರೀತಿಯಲ್ಲಿ ಕ್ರಮ ಕೈಗೊಳ್ಳದೇ ಇರುವುದನ್ನು ಸರ್ಕಾರ ಗಮನಿಸಿ ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಕನ್ನಡ ಸಂಸ್ಕೃತಿ ಇಲಾಖೆಯಿಂದ ಕಾರವಾರ ಜಿಲ್ಲೆಗೆ ಬಂದಿರುವ ಅನುದಾನದ ಬಗ್ಗೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೩೯೪ (೪೪೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ರಿಂದ ೨೦೧೬–೧೭ನೇ ಸಾಲಿನವರೆಗೆ ಕಾರವಾರ ಜಿಲ್ಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಮಾಡಲಾಗಿದೆ ; ಇದಕ್ಕೆ ಬಂದಿರುವ ಅನುದಾನ ಹಾಗೂ ಕಾರ್ಯಕ್ರಮ ಮಾಡಿರುವ ಸಂಘ ಸಂಸ್ಥೆಗಳ ವಿವರ ನೀಡುವುದು ; (ಜಿಲ್ಲಾವಾರು/ತಾಲ್ಲೂಕುವಾರು)

(ಆ) ಸದರಿ ಇಲಾಖೆಯಿಂದ ನಡೆಸುವ ಕಾರ್ಯಕ್ರಮಗಳಿಗೆ ಇರುವ ಮಾನದಂಡವೇನು ?

## ಗಿರಿಜನ ಆಶ್ರಮ ಶಾಲೆಗಳ ಗುತ್ತಿಗೆ ಶಿಕ್ಷಕರನ್ನು ಖಾಯಂಗೊಳಿಸುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯೫ (೭೩೮) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯ ಸರ್ಕಾರಿ ಗಿರಿಜನ ಆಶ್ರಮ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ (ಇಡಿಗಂಟು) ಶಿಕ್ಷಕರ ಸೇವೆಯನ್ನು ನಿರ್ಲಕ್ಷಿಸಿ ಕರ್ನಾಟಕ ಲೋಕಸೇವಾ ಆಯೋಗ ಮುಖಾಂತರ ಹೊಸದಾಗಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸುಮಾರು ೩೯೦ ಶಿಕ್ಷಕರು ಕಳೆದ ೧೮ ವರ್ಷಗಳಿಂದ ಕಡಿಮೆ ವೇತನದಲ್ಲಿ ಗುತ್ತಿಗೆ ಶಿಕ್ಷಕರಾಗಿ ಗಿರಿಜನ ಆಶ್ರಮ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಹೊಸ ನೇಮಕಾತಿಯಿಂದ ಇವರಿಗೆ ಅನ್ಯಾಯವಾದಂತಾಗುವುದಿಲ್ಲವೇ;

(ಇ) ಹಾಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಶಿಕ್ಷಕರು ಹಲವಾರು ವರ್ಷಗಳಿಂದ ಸೇವೆ ಸಲ್ಲಿಸಿ ಅನುಭವ ಹೊಂದಿರುವುದಲ್ಲದೆ ಅಗತ್ಯ ವಿದ್ಯಾರ್ಹತೆಯನ್ನು ಹೊಂದಿರುವುದರಿಂದ ಇವರನ್ನೇ ಖಾಯಂ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುತ್ತಾರೆಯೇ;

(ಈ) ಅನೇಕ ಶಿಕ್ಷಕರು ವಯೋಮಿತಿ ಮೀರಿರುವುದರಿಂದ ಬೇರೆ ಕಡೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲದಿರುವುದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ ಇವರನ್ನೇ ಹಾಲಿ ಹುದ್ದೆಗಳಲ್ಲಿ ವಿಲೀನಗೊಳಿಸಿ ಖಾಯಂ ನೌಕರರೆಂದು ಸರ್ಕಾರ ಪರಿಗಣಿಸುವುದೇ?

## ವಿಕಲಚೇತನರಿಗೆ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನೀಡುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯೬ (೭೧೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಕಲಚೇತನರಿಗೆ ಸರ್ಕಾರಿ ನೌಕರಿಯಲ್ಲಿ ಮೀಸಲಾತಿ ಕಲ್ಪಿಸಿರುವಂತೆ ಖಾಸಗಿ ಕ್ಷೇತ್ರಗಳಲ್ಲೂ ಮೀಸಲಾತಿಯನ್ನು ಕಡ್ಡಾಯಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

(ಆ) ಈ ದಿಸೆಯಲ್ಲಿ ಕಾಯಿದೆ ರೂಪಿಸಲು ಇಲಾಖೆ ಕ್ರಮ ಕೈಗೊಳ್ಳುತ್ತದೆಯೇ;

(ಇ) ವಿಕಲಚೇತನರ ಕಲ್ಯಾಣಕ್ಕಾಗಿ ಇಲಾಖೆಯಲ್ಲಿ ರೂಪಿಸಿರುವ ಕಾರ್ಯಕ್ರಮಗಳೇನು?

## ಪ್ರವಾಸೋದ್ಯಮ ಅಭಿವೃದ್ಧಿ ಕುರಿತು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯೭ (೭೧೮) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು; (ಕಳೆದ ೨ ವರ್ಷಗಳ ಮಾಹಿತಿ ನೀಡುವುದು)

(ಆ) ಈ ಜಿಲ್ಲೆಗಳಲ್ಲಿ ಪ್ರವಾಸಿಗರು ಉಳಿದುಕೊಳ್ಳಲು ಇಲಾಖೆಯ ವತಿಯಿಂದ ಎಷ್ಟು ಯಾತ್ರಿ ನಿವಾಸಗಳನ್ನು ನಿರ್ಮಿಸಲಾಗಿದೆ; ಎಷ್ಟು ಜನರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ?

## ಬಿ.ಪಿ.ಎಲ್. ಕಾರ್ಡ್ ಇಲ್ಲದವರಿಗೆ ಸರ್ಕಾರದ ಯೋಜನೆಗಳು ಲಭಿಸದಿರುವ ಬಗ್ಗೆ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೩೬೮ (೭೨೯) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಸತಿ ಯೋಜನೆಯ ಫಲಾನುಭವಿಯಾಗಲು ಬಿ.ಪಿ.ಎಲ್. ಕಾರ್ಡ್ ಹೊಂದಿರುವುದನ್ನು ಕಡ್ಡಾಯ ಪಡಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕಂಪ್ಯೂಟರ್‌ಗಳಲ್ಲಿ ಫೀಡ್ ಮಾಡುವಾಗ ಬಿ.ಪಿ.ಎಲ್. ಕಾರ್ಡ್ ಇಲ್ಲದೇ ವಸತಿ ಯೋಜನೆಯಡಿ ಮನೆಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲವೇ;

(ಇ) ಹಲವಾರು ನಿವೇಶನ ರಹಿತ ಬಡಜನರ ಬಳಿ ಈ ಬಿ.ಪಿ.ಎಲ್. ಕಾರ್ಡ್ ಇಲ್ಲದೇ ಸಮಯಕ್ಕೆ ಸರಿಯಾಗಿ ವಸತಿ ಯೋಜನೆ ಲಾಭ ಪಡೆಯಲು ಹರಸಾಹಸ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು; (ವಿವರ ನೀಡುವುದು)

(ಈ) ಎ.ಪಿ.ಎಲ್. ಕಾರ್ಡ್ ಹೊಂದಿರುವ ಬಡಜನರ ಸರ್ಕಾರದ ವಸತಿ ಯೋಜನೆ ಫಲಾನುಭವಿಯಾಗಲು ಸರ್ಕಾರದ ಕ್ರಮವೇನು? (ವಿವರ ನೀಡುವುದು)

## ರಾಜ್ಯದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಕುರಿತು

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೩೯೯ (೭೨೦) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಆ) ಈ ಎಲ್ಲಾ ಕ್ರಮಗಳ ರಾಷ್ಟ್ರ ಮಟ್ಟದ ಯೋಜನೆಗೆ ಅನುಗುಣವಾಗಿದೆಯೇ;

(ಇ) ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕು ಮತ್ತು ಪಂಚಾಯತಿ ಮಟ್ಟದಲ್ಲಿ ಈ ಗುರಿಗಳನ್ನು ಸಾಧಿಸಲು ಸರ್ಕಾರ ಯಾವ್ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ? (ವಿವರ ನೀಡುವುದು)

## ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿಳಂಬವಾಗಿ ಪಾವತಿ ಆಗುತ್ತಿರುವ ಬಗ್ಗೆ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೪೦೦ (೭೨೩) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪ್ರಾಥಮಿಕ ಶಾಲೆಯ ಎಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ವಿದ್ಯಾರ್ಥಿಗಳಿಗೆ ಆಧಾರ ಸಂಖ್ಯೆ ಜೋಡಣೆ ಪ್ರಕ್ರಿಯೆಯಲ್ಲಿ ಆದ ವಿಳಂಬದಿಂದ/ತೊಂದರೆಯಿಂದ ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿ ವೇತನ ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು;

(ಇ) ವಿದ್ಯಾರ್ಥಿ ವೇತನ ನೀಡಲು ಇನ್ನು ಬಾಕಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

## ವಲಸೆ ಕುಟುಂಬಗಳ ಮಕ್ಕಳ ಸಾಮಾಜಿಕ ಅಭಿವೃದ್ಧಿ ಕುರಿತು

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :–**

೪೦೧ (೭೨೧) ಮಾನ್ಯ ಮಹಿಳಾ ಮತ್ತು ಮಕ್ಕಳ ಆಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರತಿ ವರ್ಷ ರಾಜ್ಯಕ್ಕೆ ಎಷ್ಟು ಮಕ್ಕಳು ತಮ್ಮ ಕುಟುಂಬದ ಜೊತೆ ವಲಸೆ ಬರುತ್ತಿದ್ದಾರೆ;

(ಆ) ವಲಸೆ ಕುಟುಂಬಗಳ ಮಕ್ಕಳ ಪ್ರಾಥಮಿಕ ಪೂರ್ವ ಶಿಕ್ಷಣ, ಅಭಿವೃದ್ಧಿ, ಆರೋಗ್ಯ, ರಕ್ಷಣೆ, ಶಾಲಾ ಶಿಕ್ಷಣ ಇತ್ಯಾದಿಗಳ ಕುರಿತು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಮತ್ತು ಯೋಜನೆಗಳೇನು; (ವಿವರ ನೀಡುವುದು)

(ಇ) ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ವಲಸೆ ಮಕ್ಕಳ ಕುರಿತು ಕೈಗೊಂಡಿರುವ ಕ್ರಮಗಳಾವುವು? (ವಿವರ ನೀಡುವುದು)

## ಪರಿಶಿಷ್ಟ ಜಾತಿಯ ವಸತಿ ನಿಲಯ ಸ್ಥಾಪಿಸುವ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೦೨ (೭೧೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಹೋಬಳಿ ಕೇಂದ್ರದಲ್ಲಿ ೨೦೧೮–೧೯ನೇ ಸಾಲಿನಲ್ಲಿ ಪೋಸ್ಟ್‌ಮೆಟ್ರಿಕ್ ಪರಿಶಿಷ್ಟ ಜಾತಿಯ ವಸತಿ ನಿಲಯ ಸ್ಥಾಪಿಸುವ ಉದ್ದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಯಾವಾಗ ಆರಂಭಿಸಲಾಗುವುದು?

## ಹಿಂದುಳಿದ ವರ್ಗಗಳ ಕಲ್ಯಾಣ ಯೋಜನೆ ಮತ್ತು ಖರ್ಚಾದ ಅನುದಾನಗಳ ವಿವರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೩ (೬೪೧) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಯಾವ್ಯಾವ ಯೋಜನೆಗಳು ಜಾರಿಯಲ್ಲಿವೆ; ಕಳೆದ ೪ ವರ್ಷಗಳಲ್ಲಿ ಕಾಯ್ದಿರಿಸಿದ, ಖರ್ಚಾದ ಅನುದಾನವೆಷ್ಟು; ಕೇಂದ್ರ, ಇತರೇ ಪ್ರಾಯೋಜಿತ ಯೋಜನೆಗಳಾವುವು; ಬಿಡುಗಡೆಯಾದ ಅನುದಾನವೆಷ್ಟು;

(ಆ) ಹಿಂದುಳಿದ ವರ್ಗಗಳ ಅಧೀನದಲ್ಲಿರುವ ನಿಗಮ, ಮಂಡಳಿಗಳಾವುವು; ಅವುಗಳ ಮೂಲಕ ಅನುಷ್ಠಾನವಾಗುತ್ತಿರುವ ಯೋಜನೆಗಳಾವುವು;

(ಇ) ಹಿಂದುಳಿದ ವರ್ಗಗಳ ಅಧೀನದ ನಿಗಮ, ಮಂಡಳಿ, ಆಯೋಗಗಳಿಗೆ ಕಾಯ್ದಿರಿಸಿದ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನವೆಷ್ಟು? (೪ ವರ್ಷಗಳ–ವರ್ಷವಾರು ಮಾಹಿತಿ ನೀಡುವುದು)

## ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರ ನೀಡಿರುವ ಅನುದಾನದ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೪ (೬೩೮) ಮಾನ್ಯ ಆಹಾರ ಮತ್ತು ನಾಗರಿಕರ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅನ್ನಭಾಗ್ಯ ಯೋಜನೆಯು ಕೇವಲ ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆ ಎನ್ನುವಂತೆ ಬಿಂಬಿಸುತ್ತಿರುವುದು ಮತ್ತು ಪ್ರಚಾರ ಮಾಡುತ್ತಿರುವುದು ನಿಜವೇ;

(ಆ) ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಮತ್ತು ಇತರ ಪಡಿತರ ಸಾಮಾಗ್ರಿಗಳನ್ನು ಸಬ್ಸಿಡಿ ದರದಲ್ಲಿ ಖರೀದಿಸಿ, ರಾಜ್ಯಗಳಿಗೆ ವಿತರಿಸಲು ಕೇಂದ್ರ ಸರ್ಕಾರ ಗರಿಷ್ಠ ಅನುದಾನ ವ್ಯಯಿಸುತ್ತಿದ್ದರೂ, ಕೇವಲ ರಾಜ್ಯದ ಯೋಜನೆ ಎಂದು ಬಿಂಬಿಸುವ ಉದ್ದೇಶ ಮತ್ತು ಅವಶ್ಯಕತೆಗಳೇನು;

(ಇ) ಅನ್ನಭಾಗ್ಯ ಯೋಜನೆಯಡಿ ಕಳೆದ ೪ ವರ್ಷದಲ್ಲಿ ಖರೀದಿಸಿದ ಅಕ್ಕಿ ಮತ್ತು ಇತರೆ ಪಡಿತರ ಸಾಮಾಗ್ರಿಗಳ ಪರಿಮಾಣವೆಷ್ಟು;

ಇದಕ್ಕಾಗಿ ಕೇಂದ್ರ ಸರ್ಕಾರ ಖರ್ಚು ಮಾಡಿದ ಒಟ್ಟು ಅನುದಾನವೆಷ್ಟು; ರಾಜ್ಯ ಸರ್ಕಾರ ಖರ್ಚು ಮಾಡಿದ ಒಟ್ಟು ಅನುದಾನವೆಷ್ಟು; ಪ್ರತಿ ಕೆ.ಜಿ. ಅಕ್ಕಿ ಮತ್ತು ಇತರೆ ಪಡಿತರ ಸಾಮಾಗ್ರಿಗೆ ನೀಡಿದ ದರವೆಷ್ಟು; (ವರ್ಷವಾರು ವಿವರ ನೀಡುವುದು)

(ಈ) ಅನ್ನಭಾಗ್ಯ ಯೋಜನೆಗೆ ಒಳಪಡುವ ಫಲಾನುಭವಿಗಳ ಸಂಖ್ಯೆ ಎಷ್ಟು; ಪ್ರತಿ ಫಲಾನುಭವಿಗೆ ವಿತರಿಸುವ ಪಡಿತರ ಸಾಮಗ್ರಿಯ ಪ್ರಮಾಣವೆಷ್ಟು;

(ಉ) ಅನ್ನಭಾಗ್ಯ ಯೋಜನೆಯು ಸೇರಿದಂತೆ ಪಡಿತರ ಸಾಮಾಗ್ರಿ ಖರೀದಿ ಮತ್ತು ವಿತರಣೆಯಲ್ಲಿ ಪಾರದರ್ಶಕತೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

## ಗ್ರಾಮ, ತಾಲ್ಲೂಕು ವಿಕಲಚೇತನರ ಪುನರ್ವಸತಿ ಕಾರ್ಯಕರ್ತರ ಗೌರವ ಧನ ಹೆಚ್ಚಳದ ಕುರಿತು

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೫ (೬೩೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ವಿಕಲಚೇತನರ ಕಲ್ಯಾಣಕ್ಕಾಗಿರುವ ಯೋಜನೆಗಳಾವುವು;

(ಆ) ರಾಜ್ಯದಲ್ಲಿ ಗುರುತಿಸಿರುವ ಒಟ್ಟು ವಿಕಲಚೇತನರ ಸಂಖ್ಯೆ ಎಷ್ಟು;

(ಇ) ವಿಕಲಚೇತನರ ಪುನರ್ವಸತಿಗಾಗಿ ಕೆಲಸ ನಿರ್ವಹಿಸುತ್ತಿರುವ ತಾಲ್ಲೂಕು ಮತ್ತು ಗ್ರಾಮ ಪುನರ್ವಸತಿ ಕಾರ್ಯಕರ್ತರ ಸಂಖ್ಯೆ ಎಷ್ಟು; ಅವರಿಗೆ ನೀಡುತ್ತಿರುವ ಗೌರವಧನ ಭತ್ಯೆ ಎಷ್ಟು; ಖಾಲಿ ಹುದ್ದೆ ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು;

(ಈ) ಪುನರ್ವಸತಿ ಕಾರ್ಯಕರ್ತರ ಗೌರವ ಧನ ಹೆಚ್ಚಳ ಮತ್ತು ವಿಶೇಷ ಭತ್ಯೆ ಒದಗಿಸಲು ಸರ್ಕಾರದ ನಿಲುವೇನು; ಈ ಕುರಿತು ಸರ್ಕಾರ ಏನೇನು ಕ್ರಮ ಕೈಗೊಳ್ಳಲಿದೆ;

(ಉ) ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನ ಸೇರಿದಂತೆ, ಸರ್ಕಾರಿ ಹುದ್ದೆಗಳಲ್ಲಿ ವಿಕಲಚೇತನರಿಗೆ ಮೀಸಲಿಸಿರುವ ಖಾಲಿ ಹುದ್ದೆಗಳ ನೇಮಕಾತಿ, ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಕುರಿತು ಇಲಾಖೆ ಏನೇನು ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು)

## ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಮೂಲಸೌಕರ್ಯ ಕೊರತೆ, ಸಿಬ್ಬಂದಿ ಕೊರತೆ ಕುರಿತು

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೬ (೬೪೦) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಆರೋಗ್ಯ ಇಲಾಖೆಯು ಮೂಲಕ ಅನುಷ್ಠಾನಗೊಳ್ಳುತ್ತಿರುವ ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಯೋಜನೆಗಳಾವುವು;

(ಆ) ಕಳೆದ ೪ ವರ್ಷದಲ್ಲಿ ಕೇಂದ್ರ ಮತ್ತು ಇತರ ಮೂಲಗಳಿಂದ ಆರೋಗ್ಯ ಇಲಾಖೆಗೆ ಬಂದ ಅನುದಾನವೆಷ್ಟು; ಖರ್ಚಾದ ಅನುದಾನವೆಷ್ಟು;

(ಇ) ರಾಜ್ಯದಲ್ಲಿರುವ ಆರೋಗ್ಯ ಉಪಕೇಂದ್ರ–ಪ್ರಾಥಮಿಕ ಆರೋಗ್ಯ ಕೇಂದ್ರ–ಸಮುದಾಯ ಆರೋಗ್ಯ ಕೇಂದ್ರಗಳೆಷ್ಟು; ಮಂಜೂರಾದ–ಕಾರ್ಯ ನಿರ್ವಹಿಸುತ್ತಿರುವ–ಖಾಲಿಯಿರುವ ಹುದ್ದೆಗಳೆಷ್ಟು; (ಸಂಪೂರ್ಣ ವಿವರ ನೀಡುವುದು)

(ಈ) ರಾಜ್ಯದ ಗ್ರಾಮೀಣ ಜನರ ಆರೋಗ್ಯದ ಹಿತದೃಷ್ಟಿಯಿಂದ, ಆರೋಗ್ಯ ಕೇಂದ್ರಗಳ ಮೂಲಸೌಕರ್ಯ, ಸಿಬ್ಬಂದಿ ಕೊರತೆ, ಔಷಧ ಕೊರತೆ ನಿವಾರಿಸುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಸರ್ಕಾರದ ಮುಂದಿರುವ ಯೋಜನೆಗಳೇನು?

## ಆರೋಗ್ಯ ಇಲಾಖೆಯಲ್ಲಿನ ನ್ಯೂನತೆಗಳ ಬಗ್ಗೆ

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೭ (೪೨೯) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಮತ್ತು ಡಿ ವೃಂದಕ್ಕೆ ಸೇರಿರುವ ನೌಕರರುಗಳಿಗೆ ಸಂಬಂಧಿಸಿದಂತೆ, ಆಡಳಿತ ವಿಭಾಗ ಡಿ.ಪಿ.ಎನ್ ವಿಭಾಗ, ಜಾಗೃತ ಕೋಶ ವಿಭಾಗಗಳು ಸೇರಿದಂತೆ, ಎಲ್ಲಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬ ವಿಷಯ ನಿರ್ವಾಹಕರ ಬಳಿ ಯಾವ ಯಾವ ಕಡತಗಳು ಯಾವ ದಿನಾಂಕದಿಂದ ವಿಲೇವಾರಿಗೆ ಬಾಕಿ ಇರುತ್ತವೆ ಅನಗತ್ಯ ವಿಳಂಬ ತೋರಿರುವ ಅಧಿಕಾರಿಗಳ/ನೌಕರರುಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು; (ಸಂಪೂರ್ಣ ವಿವರ ನೀಡುವುದು)

(ಆ) ಕೇಂದ್ರದ ಆಹಾರ ಸುರಕ್ಷತಾ ಕಾಯ್ದೆಗಳಿಗೆ ವಿರುದ್ಧವಾಗಿ ವೈದ್ಯರುಗಳನ್ನು ಆಹಾರ ಸುರಕ್ಷತಾ ಅಧಿಕಾರಿಗಳನ್ನಾಗಿ, ಅಂಕಿತ ಅಧಿಕಾರಿಗಳನ್ನಾಗಿ, ಉಪ ನಿರ್ದೇಶಕನ್ನಾಗಿ ಹಾಗೂ ಜಂಟಿ ಆಯುಕ್ತರನ್ನಾಗಿ, ಹೆಚ್ಚುವರಿ ಪ್ರಭಾವದ ಮೇಲೆ ನೇಮಕ ಮಾಡಲಾಗಿರುವುದು ನಿಜವೇ; ಈ ಆದೇಶಗಳನ್ನು

ರದ್ದುಪಡಿಸಲಾಗುವುದೆ; ಸೇವಾ ಜೇಷ್ಠತೆಯಲ್ಲಿ ಕಿರಿಯ ವೈದ್ಯರನ್ನು ಎರಡು ಕಡೆ ಉಪ ನಿರ್ದೇಶಕರನ್ನಾಗಿ ನೇಮಕ ಮಾಡಿರುವುದು ನಿಜವೇ; (ಸಂಪೂರ್ಣ ವಿವರ ಒದಗಿಸುವುದು)

(ಇ) ಪ್ರತಿಯೊಬ್ಬ ಆಹಾರ ಸುರಕ್ಷತಾ ಅಧಿಕಾರಿಯು ಮಾಸಿಕವಾರು ಎಷ್ಟು ಆಹಾರ ಮಾದರಿಗಳನ್ನು ವಿಶ್ಲೇಷಣೆಗೆ ಸಂಗ್ರಹಿಸಬೇಕಾಗಿದೆ; ಈ ನಿಟ್ಟಿನಲ್ಲಿ ಕಳೆದ ಎರಡು ವರ್ಷಗಳಿಂದ ಕಳಪೆ ಸಾಧನೆ ತೋರಿರುವ ಆಹಾರ ಸುರಕ್ಷತಾ ಅಧಿಕಾರಿಗಳ (ವೈದ್ಯರು ಹಾಗೂ ಇತರರು ಸೇರಿದಂತೆ) ವಿರುದ್ಧ ಕೈಗೊಂಡ ಕ್ರಮಗಳೇನು; ಈ ವಿಭಾಗದಲ್ಲಿ ವಿಲೇವಾರಿಗೆ ಬಾಕಿ ಇರುವ ಕಡತಗಳ ವಿವರ ಒದಗಿಸುವುದು;

(ಈ) ಆಹಾರ ಸುರಕ್ಷತಾ ವಿಭಾಗದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಯಾವ ಯಾವ ಅಹಾರ ಸುರಕ್ಷತಾ ಅಧಿಕಾರಿಗಳನ್ನು ಯಾವ ಯಾವ ಕಾರಣಗಳಿಂದಾಗಿ ಅಮಾನತ್ತು ಮಾಡಲಾಗಿದೆ; ಸದರಿಯವರ ವಿರುದ್ಧ ಕೈಗೊಂಡಿರುವ ಹಾಗೂ ಜಾರಿಗೊಳಿಸಿರುವ ಶಿಸ್ತಿನ ಕ್ರಮಗಳೇನು; ಆಹಾರ ಸುರಕ್ಷತಾ ವಿಭಾಗದಲ್ಲಿನ ಹಲವು ಆಹಾರ ಸುರಕ್ಷತಾ ಅಧಿಕಾರಿಗಳನ್ನು ಅಮಾನತ್ತುಗೊಳಿಸಿ, ತದನಂತರ ಕೆಲವರ ಅಮಾನತ್ತನ್ನು ತೆರವುಗೊಳಿಸಿ ಬೇರೊಂದು ವಿಭಾಗವಾದ ಆರೋಗ್ಯ ಇಲಾಖೆಗೆ ನೇಮಕ ಮಾಡಿರುವುದು ನಿಜವೇ; ಇದರಿಂದಾಗಿ ಅನ್ಯಾಯಕ್ಕೆ ಒಳಗಾದ ನೌಕರರುಗಳಿಗೆ ಪುನಃ ಅದೇ ವಿಭಾಗ (ಆಹಾರ ಸುರಕ್ಷತಾ ವಿಭಾಗ)ದಲ್ಲಿಯೇ ಮುಂದುವರೆಸಿ ಆದೇಶ ಹೊರಡಿಸಲು ಸರ್ಕಾರಕ್ಕಿರುವ ತೊಂದರೆ ಏನು; (ವಿವರ ಒದಗಿಸುವುದು)

(ಉ) ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಕಾಯ್ದೆ ೨೦೦೬, ೨೦೧೧ ಮತ್ತು ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಆದೇಶದಂತೆ ೬೬ ಆಹಾರ ಸುರಕ್ಷತಾ ಅಧಿಕಾರಿಗಳ ಹುದ್ದೆಗಳನ್ನು (ಹಾಲಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು) ಆರೋಗ್ಯ ಇಲಾಖೆಯಿಂದ

ಆಹಾರ ಸುರಕ್ಷತಾ ವಿಭಾಗಕ್ಕೆ ವಿಲೀನಗೊಳಿಸುವ/ವರ್ಗಾಯಿಸುವ ಸಂಬಂಧ ಯಾವ ಕ್ರಮ ಕೈಗೊಳ್ಳಲಾಗಿದೆ; ಈ ಬಗ್ಗೆ ಯಾರು ಯಾರು ಪತ್ರ/ಮನವಿಗಳನ್ನು ನೀಡಿರುತ್ತಾರೆ; ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಅಭಿಪ್ರಾಯ ಪಡೆಯಲು ಸರ್ಕಾರಕ್ಕಿರುವ ತೊಂದರೆ ಏನು? (ವಿವರ ಒದಗಿಸುವುದು)

## ವಿಧಾನ ಪರಿಷತ್ ಸದಸ್ಯರಿಗೆ ಕ್ಷೇತ್ರಾಭಿವೃದ್ಧಿಗಾಗಿ ಹಂಚಿಕೆ ಮಾಡುವ ಅನುದಾನದಲ್ಲಿ ತಾರತಮ್ಯವಾಗಿರುವ ಬಗ್ಗೆ

**ಶ್ರೀ ಕಾಂತರಾಜು (ಬಿ.ಎಂ.ಎಲ್.) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೮ (೬೦೧) ಮಾನ್ಯ ಯೋಜನೆ, ಸಾಂಖ್ಯಿಕ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯೋಜನಾ ಮತ್ತು ಸಾಂಖ್ಯಿಕ ಇಲಾಖೆ ವ್ಯಾಪ್ತಿಗೆ ಬರುವ ಕೆಲವು ನಿಗಮ/ಮಂಡಳಿಗಳಲ್ಲಿ ಅನುದಾನ ಹಂಚಿಕೆ ಮಾಡುವಾಗ ವಿಧಾನ ಪರಿಷತ್ ಸದಸ್ಯರಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ತಾರತಮ್ಮ ನಿವಾರಣೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ಅದೇ ರೀತಿಯಾಗಿ ಬಯಲು ಸೀಮೆ ಮಂಡಳಿ, ಅನುದಾನ ಹಂಚಿಕೆ ಮಾಡುವಾಗ ವಿಧಾನ ಸಭೆಯ ಸದಸ್ಯರಿಗೆ ಹಂಚಿಕೆ ಮಾಡಿದ ಅನುದಾನದಂತೆ, ವಿಧಾನ ಪರಿಷತ್ ಸದಸ್ಯರಿಗೆ ಅನುದಾನ ಹಂಚಿಕೆ ಮಾಡಿ ಈ ವ್ಯತ್ಯಾಸವನ್ನು ಸರಿಪಡಿಸಲು ಸರ್ಕಾರ ಕೂಡಲೇ ಕ್ರಮ ವಹಿಸುವುದೇ; (ವಿವರ ನೀಡುವುದು)

(ಈ) ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆ ಹೊಂದಿದ ವಿಧಾನ ಪರಿಷತ್ ಸದಸ್ಯರು ಒಂದು ಜಿಲ್ಲೆಗೆ ಅಥವಾ ೨ ಜಿಲ್ಲೆಗೆ ಒಬ್ಬರಂತೆ ಆಯ್ಕೆ ಆಗುವುದರಿಂದ ಇವರ ಕ್ಷೇತ್ರ ೧೦–೧೫ ವಿಧಾನ ಸಭೆಯ ಕ್ಷೇತ್ರಗಳನ್ನು ಒಳಗೊಂಡಿರುವಂತೆ ಇರುವುದರಿಂದ ಈ ಕ್ಷೇತ್ರದಿಂದ ಆಯ್ಕೆ ಹೊಂದಿದ ಪರಿಷತ್ ಸದಸ್ಯರಿಗೆ ಎಲ್ಲಾ ನಿಗಮ/ಮಂಡಳಿ/ ಕ್ಷೇತ್ರಾಭಿವೃದ್ಧಿ ಅನುದಾನವನ್ನು ಹೆಚ್ಚಿಸಲು ಸರ್ಕಾರ ಕ್ರಮ ವಹಿಸುವುದೇ? (ವಿವರ ನೀಡುವುದು)

## ರಾಜ್ಯದಲ್ಲಿರುವ ವಿಕಲಚೇತನರಿಗೆ ನೀಡಿರುವ ಸೌಲಭ್ಯಗಳ ಬಗ್ಗೆ

**ಶ್ರೀ ಕಾಂತರಾಜು (ಬಿ.ಎಂ.ಎಲ್.) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೯೯ (೬೦೦) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ವಿಕಲಚೇತನರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ವಿಕಲಚೇತನರಿಗೆ ಸರ್ಕಾರ ಯಾವ ಯಾವ ಸೌಲಭ್ಯವನ್ನು ನೀಡುತ್ತಿದೆ;

(ಇ) ಈ ವಿಕಲಚೇತನರಿಗೆ ಸೌಲಭ್ಯವನ್ನು ನೀಡಲು ಸರ್ಕಾರ ೨೦೧೭– ೧೮ನೇ ಸಾಲಿನಲ್ಲಿ ಒದಗಿಸಿರುವ ಅನುದಾನವೆಷ್ಟು; (ಮಾಹಿತಿ ನೀಡುವುದು)

(ಈ) ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿರುವ ವಿಕಲಚೇತನರಿಗೆ ಯಾವ ಯಾವ ಸೌಲಭ್ಯವನ್ನು ನೀಡಲಾಗಿದೆ; ಇದಕ್ಕಾಗಿ ಸರ್ಕಾರ ಒದಗಿಸಿರುವ ಅನುದಾನವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಈ ಸೌಲಭ್ಯಗಳನ್ನು ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು? (ವಿವರ ನೀಡುವುದು)

## ಸಮಾಜ ಕಲ್ಯಾಣ ಇಲಾಖೆಯಲ್ಲಿ ಪುಸ್ತಕ ಖರೀದಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೧೦ (೬೮೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖೆಯ ಪುಸ್ತಕ ಖರೀದಿಯಲ್ಲಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಇಲಾಖೆಯಲ್ಲಿ ಪುಸ್ತಕ ಖರೀದಿ ಮಾಡಲು ಇರುವ ಮಾರ್ಗಸೂಚಿಗಳೇನು; ಪುಸ್ತಕ ಖರೀದಿ ಮಾಡುವಾಗ ಇವುಗಳನ್ನು ಅನುಸರಿಸಲಾಗುತ್ತಿದೆಯೇ;

(ಇ) ಟೆಂಡರ್ ಪ್ರಕ್ರಿಯೆಯಲ್ಲಿ ಯಾವ ಯಾವ ಎಷ್ಟು ಪ್ರಕಾಶಕರು ಭಾಗಿಯಾಗಿದ್ದರು; ಸದರಿ ಪುಸ್ತಕ ಖರೀದಿ ಪ್ರಕ್ರಿಯೆಯ ಸಂಪೂರ್ಣ ಮಾಹಿತಿ ನೀಡುವುದು;

(ಈ) ಸದ್ಯ ಯಾವ ಯಾವ ಪ್ರಕಾಶಕರಿಗೆ ಯಾವ ಯಾವ ದರದಲ್ಲಿ ಟೆಂಡರ್ ನೀಡಲಾಗಿದೆ; ಸದರಿ ಪುಸ್ತಕ ಖರೀದಿ ಟೆಂಡರ್‌ನ ಒಟ್ಟು ಮೊತ್ತವೆಷ್ಟು; (ವಿವರ ನೀಡುವುದು)

(ಉ) ಸನ್ ೨೦೧೫–೧೬, ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಟ್ಟು ಎಷ್ಟು ಮೊತ್ತದ ಪುಸ್ತಕ ಖರೀದಿಸಲಾಗಿದೆ? (ವರ್ಷಾವಾರು ವಿವರ ನೀಡುವುದು)

## ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞವೈದ್ಯರ ಕೊರತೆ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೧೧ (೬೮೫) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಅದರಲ್ಲೂ ಗ್ರಾಮೀಣ ಭಾಗದ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆಯಿಂದ ರೋಗಿಗಳು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಹಾಲಿ ಇಲಾಖೆಯಲ್ಲಿ ಎಲ್ಲಾ ವೃಂದದ ಹುದ್ದೆಗಳನ್ನು ಸೇರಿಸಿದಂತೆ ಒಟ್ಟು ಖಾಲಿ ಇರುವ ಹುದ್ದೆಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಆರೋಗ್ಯ ಇಲಾಖೆಯಲ್ಲಿನ ಖಾಲಿ ಇರುವ ತಜ್ಞ ವೈದ್ಯರುಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ಯಾವ ಕಾಲಮಿತಿಯಲ್ಲಿ ಸದರಿ ನೇಮಕಾತಿ ಪ್ರಕ್ರಿಯೆಯು ಪೂರ್ಣಗೊಳಿಸಲಾಗುವುದು;

(ಉ) ಸರ್ಕಾರವು ರೋಗಿಗಳ ಸಂಕಷ್ಟ ಪರಿಹರಿಸುವ ನಿಟ್ಟಿನಲ್ಲಿ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಿದೆಯೇ? (ವಿವರ ನೀಡುವುದು)

## ರಾಜ್ಯದಲ್ಲಿ ಅನಗತ್ಯ ಸಿಸೇರಿಯನ್ ಶಸ್ತ್ರ ಚಿಕಿತ್ಸೆಗಳು ಹೆಚ್ಚಾಗುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೧೨ (೭೮೩) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವೈದ್ಯರು ಹಣದಾಸೆಯಿಂದಾಗಿ ಗರ್ಭಿಣಿಯರಿಗೆ ಅನಗತ್ಯ ಸಿಸೇರಿಯನ್ ಶಸ್ತ್ರ ಚಿಕಿತ್ಸೆಗೆ ಸಲಹೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಗರ್ಭಿಣಿಯರಿಗೆ ಯಾವ ಯಾವ ಸಂದರ್ಭದಲ್ಲಿ ಸಿಸೇರಿಯನ್ ಶಸ್ತ್ರ ಚಿಕಿತ್ಸೆ ಅನಿವಾರ್ಯ; (ವಿವರ ನೀಡುವುದು)

(ಇ) ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಂತೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಪ್ರಮಾಣದ ಸಿಸೇರಿಯನ್ ಶಸ್ತ್ರ ಚಿಕಿತ್ಸೆಗೆ ಗರ್ಭಿಣಿಯರನ್ನು ಒಳಪಡಿಸಲಾಗಿದೆ; (ವರ್ಷವಾರು ವಿವರ ನೀಡುವುದು)

(ಈ) ಅನಗತ್ಯ ಸಿಸೇರಿಯನ್ ಶಸ್ತ್ರ ಚಿಕಿತ್ಸೆಯನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಉ) ಇದರ ನಿರ್ವಹಣೆ ಮಾಡುವವರು ಯಾರು; ಹೇಗೆ ನಿರ್ವಹಿಸುವರು? (ವಿವರ ನೀಡುವುದು)

## ಕಿತ್ತೂರು ಚೆನ್ನಮ್ಮನವರ ವೀರಸೇನಾನಿ ಅಮಟೂರು ಬಾಳಪ್ಪನವರ ಜನ್ಮಸ್ಥಳವನ್ನು ಅಭಿವೃದ್ಧಿ ಮಾಡುವ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೧೩ (೭೮೬) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸ್ವಾತಂತ್ರ್ಯ ಹೋರಾಟಗಾರ್ತಿ ವೀರರಾಣಿ ಕಿತ್ತೂರು ಚೆನ್ನಮ್ಮನವರ ವೀರ ಸೇನಾನಿ ಅಮಟೂರ ಬಾಳಪ್ಪನವರ ಜನ್ಮ ಭೂಮಿ ಅಮಟೂರ ಗ್ರಾಮವನ್ನು ಸಮಗ್ರ ಯಾತ್ರಾ ಸ್ಥಳವಾಗಿ ಅಭಿವೃದ್ಧಿಪಡಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ;

(ಆ) ಹಾಗಿದ್ದಲ್ಲಿ, ಅಭಿವೃದ್ಧಿಪಡಿಸುವ ಕುರಿತು ಕ್ರಿಯಾ ಯೋಜನೆ ಸಿದ್ದಪಡಿಸಲಾಗಿದೆಯೇ; ಸಿದ್ಧಪಡಿಸಿದ್ದರೆ, ಅದಕ್ಕೆ ತಗಲುವ ವೆಚ್ಚವೆಷ್ಟು;

(ಇ) ಅಭಿವೃದ್ಧಿಪಡಿಸಲು ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ ; ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲು ನಿರ್ಧರಿಸಲಾಗಿದೆ; (ವಿವರ ನೀಡುವುದು)

(ಈ) ಯಾವ ಕಾಲಮಿತಿಯಲ್ಲಿ ಸದರಿ ಅಮಟೂರ ಗ್ರಾಮವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು?

## ಬೆಳಗಾವಿ ಮತಕ್ಷೇತ್ರದ ಆಸ್ಪತ್ರೆಗಳ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೪೧೪ (೬೭೭) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಯಾವ ಯಾವ ಮಟ್ಟದ ಆಸ್ಪತ್ರೆಗಳಿವೆ; ಹಾಗೂ ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ;

(ಆ) ಇತ್ತೀಚಿನ ದಿನಗಳಲ್ಲಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಔಷಧಗಳ ಕೊರತೆಯಿಂದ ಬೇರೆಡೆಗೆ ಚೀಟಿ ಬರೆದು ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅದಕ್ಕೆ ಕಾರಣಗಳೇನು; ಸರಿಯಾದ ಸಮಯಕ್ಕೆ ಔಷಧ ಸರಬರಾಜು ಮಾಡದಿರಲು ಕಾರಣವೇನು;

(ಇ) ರೋಗಿಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕೂಡಲೇ ಕ್ರಮಕೈಗೊಳ್ಳುವುದೇ?

## ಬೆಳಗಾವಿ ಮತಕ್ಷೇತ್ರದ ವಿಕಲಚೇತನರಿಗೆ ನೀಡಿರುವ ಅನುದಾನದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೪೧೫ (೯೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ವಿಕಲಚೇತನರಿಗೆ ಕಳೆದ ಐದು ವರ್ಷದಲ್ಲಿ ನೀಡಿರುವ ಅನುದಾನ ಎಷ್ಟು; ಅವು ಯಾವುವು;

(ಆ) ಹಲವಾರು ವರ್ಷಗಳಿಂದ ಬೇಡಿಕೆಗೆ ಬಂದಿರುವ ಅರ್ಜಿಗಳು ಎಷ್ಟು; ಅವು ಯಾವುವು;

(ಇ) ಬೇಡಿಕೆ ತಕ್ಕಂತೆ ಸ್ಪಂದಿಸದೆ, ಉದಾಸೀನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ವಿಕಲಚೇತನರಿಗೆ ನೀಡುವ ಸೌಲಭ್ಯಗಳು ಯಾವುವು; ಹಾಗೂ ಈ ವರ್ಷದಲ್ಲಿ ಸ್ವೀಕರಿಸಿದ ಎಲ್ಲಾ ಅರ್ಜಿಗಳಿಗೆ ಅನುದಾನ ನೀಡಲಾಗುವುದೇ?

## ಬೆಳಗಾವಿ ಮತಕ್ಷೇತ್ರದಲ್ಲಿ ಹರಿಜನ ಮತ್ತು ಗಿರಿಜನರಿಗೆ ನೀಡಿರುವ ಅನುದಾನದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೪೧೬ (೯೫) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಕಳೆದ ಐದು ವರ್ಷದಲ್ಲಿ ಹರಿಜನ–ಗಿರಿಜನರಿಗೆ ನೀಡಿರುವ ಅನುದಾನಗಳು ಎಷ್ಟು; ಅವು ಯಾವುವು;

(ಆ) ಬೇಡಿಕೆಗೆ ತಕ್ಕಂತೆ ಅನುದಾನ ನೀಡಲಾಗಿದೆಯೇ; ಅನೇಕ ವರ್ಷಗಳಿಂದ ಬೇಡಿಕೆ ಇಟ್ಟಿದ್ದರೂ ಸಕಾಲದಲ್ಲಿ ಅನುದಾನ ನೀಡದಿರಲು ಕಾರಣವೇನು;

(ಇ) ಹಲವಾರು ಬಾರಿ ಸಂಬಂಧಪಟ್ಟ ಕಛೇರಿಗೆ ಅಲೆದರೂ ಸ್ಪಂದಿಸದಿರಲು ಕಾರಣವೇನು; ಈ ಬಗ್ಗೆ ಸರ್ಕಾರ ಕೂಡಲೇ ಸರಿಪಡಿಸಿ ಕ್ರಮ ಕೈಗೊಳ್ಳುವುದೆ?

## APL ಮತ್ತು BPL ಕಾರ್ಡ್‌ಗಳ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೪೧೭ (೬೯) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಇದುವರೆಗೆ ಸರ್ಕಾರ ನೀಡಿರುವ APL ಮತ್ತು BPL ಕಾರ್ಡ್‌ಗಳೆಷ್ಟು;

(ಆ) BPL ಕಾರ್ಡ್ ಸಿಗದೇ ಅರ್ಜಿ ಸಲ್ಲಿಸಿದ್ದರೂ ಇದುವರೆಗೆ ನೀಡದಿರಲು ಕಾರಣವೇನು;

(ಇ) ಹಲವಾರು ವರ್ಷಗಳಿಂದ ಅರ್ಜಿ ಸಲ್ಲಿಸಿ ಕಾರ್ಡು ಪಡೆಯದಿರುವ ಕುಟುಂಬಗಳು ಎಷ್ಟು;

(ಈ) ಎಷ್ಟು ದಿನಗಳಲ್ಲಿ ಕಾರ್ಡು ವಿತರಿಸಲಾಗುವುದು?

## ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೪೧೮ (೯೮) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ದಕ್ಷಿಣ ಮತಕ್ಷೇತ್ರಕ್ಕೆ ಕಳೆದ ಐದು ವರ್ಷದಲ್ಲಿ ನೀಡಿರುವ ಅನುದಾನ ಎಷ್ಟು; (ವಿವರ ನೀಡುವುದು)

(ಆ) ಆ ಭಾಗದ ಜನರಿಂದ ಬಂದಿದ್ದ ಬೇಡಿಕೆಗಳು ಯಾವುವು;

(ಇ) ಬಂದಿದ್ದಲ್ಲಿ, ಈ ವರ್ಷದ ಆಯವ್ಯಯದಲ್ಲಿ ನೀಡಲಾಗುವುದೇ?

## ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಗಳ ಹುಟ್ಟೂರುಗಳಲ್ಲಿ ಸ್ಮಾರಕ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು):–**

೪೧೯ (೭೦೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಗಳಿಗೆ ಕುವೆಂಪುರವರ ಕುಪ್ಪಳ್ಳಿ–ಕವಿಶೈಲ ಸ್ಮಾರಕದಂತೆ, ಅವರ ಹುಟ್ಟೂರುಗಳಲ್ಲಿ ಸ್ಮಾರಕ ನಿರ್ಮಾಣ ಮಾಡುವುದಾಗಿ ಘೋಷಿಸಿದ್ದು ನಿಜವೇ; (ಮಾಹಿತಿ ನೀಡುವುದು)

(ಆ) ಇದುವರೆವಿಗೂ ಸರ್ಕಾರ ಎಷ್ಟು ಜನ ಕವಿಗಳ ಜನ್ಮಸ್ಥಳಗಳಲ್ಲಿ ಸ್ಮಾರಕ ನಿರ್ಮಿಸಿದೆ; ಈ ಕಾರ್ಯಕ್ರಮಕ್ಕೆ ನಿಗಧಿಯಾದ ಹಣವೆಷ್ಟು ಹಾಗೂ ಬಳಕೆಯಾದ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು)

(ಇ) ನಮ್ಮ ಹೆಮ್ಮೆಯ ಕವಿಗಳ ಹುಟ್ಟೂರುಗಳಲ್ಲಿ ಸ್ಮಾರಕ ನಿರ್ಮಿಸಲು ಉಂಟಾಗಿರುವ ಅಡೆತಡೆಗಳೇನು; ಪ್ರತಿ ಕವಿಗಳ ಹುಟ್ಟೂರಿನಲ್ಲಿ ತಲೆದೋರಿರುವ ಸಮಸ್ಯೆಗಳ ವಿವರ ನೀಡುವುದು;

(ಈ) ಅಡೆತಡೆಗಳನ್ನು ನಿವಾರಿಸಿ ಸರ್ಕಾರ ರಾಜ್ಯದ ಹೆಮ್ಮೆಯ ಕವಿಗಳ ಸ್ಮಾರಕ ನಿರ್ಮಿಸಲು ಮುಂದಾಗುವುದೇ; ಯಾವ ಕಾಲಮಿತಿಯಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುವುದು? (ವಿವರ ನೀಡುವುದು)

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಎಸ್.ಸಿ.ಪಿ./ ಟಿ.ಎಸ್.ಪಿ. ಯೋಜನೆ ಜಾರಿಗೊಳಿಸಿರುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು):–**

೪೨೦ (೭೦೮) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗಗಳ ಅಭಿವೃದ್ಧಿಗಾಗಿ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯನ್ನು ಎಂದಿನಿಂದ ಜಾರಿಗೊಳಿಸಿದೆ; ಈ ಯೋಜನೆಯ ಸ್ವರೂಪ ಮತ್ತು ರೂಪುರೇಷೆಗಳೇನು; (ವಿವರ ನೀಡುವುದು)

(ಆ) ಈ ಕಾಯ್ದೆ ಅಥವಾ ಯೋಜನೆ ಜಾರಿಗೆ ಬಂದಾಗಿನಿಂದ, ಯಾವ ಯಾವ ಇಲಾಖೆಗಳಿಗೆ ಸರ್ಕಾರ ಎಷ್ಟು ಅನುದಾನ ಬಿಡುಗಡೆಗೊಳಿಸಿದೆ; ಖರ್ಚು ಮಾಡಿದ ಅನುದಾನವೆಷ್ಟು; ಜನವರಿ ೨೦೧೮ಕ್ಕೆ ಕೊನೆಗೊಂಡಂತೆ ಇಲಾಖಾವಾರು ಹಾಗೂ ವರ್ಷಾವಾರು ನಿಗಧಿ–ಬಳಕೆಯಾದ ಮೊತ್ತದ ವಿವರ ನೀಡುವುದು;

(ಇ) ವಿಶೇಷ ಅನುದಾನ ನೀಡಿಕೆ ಹೊರತಾಗಿಯೂ, ಹಲವು ಇಲಾಖೆಗಳಲ್ಲಿ ಈ ಅನುದಾನ ಬಳಕೆಯಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಇಲಾಖಾಧಿಕಾರಿಗಳ ವಿರುದ್ಧ ಯಾವ ರೀತಿಯ ಕ್ರಮ ಜರುಗಿಸಲಾಗುವುದು;

(ಈ) ಈ ವರ್ಗದ ಜನರ ಸರ್ವತೋಮುಖ ಅಭಿವೃದ್ಧಿ ಗೊಳಿಸಬಹುದಾದ ಇಲಾಖೆಗಳಾದಂತಹ ಉನ್ನತ ಶಿಕ್ಷಣ, ವಿಜ್ಞಾನ–ತಂತ್ರಜ್ಞಾನ, ಶಿಕ್ಷಣ ಇಲಾಖೆಗಳಲ್ಲಿ ಅನುದಾನ ಬಳಕೆಯಾಗದೆ ಉಳಿದಿರುವುದಕ್ಕೆ ಕಾರಣವೇನು? (ವಿವರ ನೀಡುವುದು)

## ಸಿಸೇರಿಯನ್ ಹೆರಿಗೆ ಹೆಚ್ಚಾಗುತ್ತಿರುವ ಬಗ್ಗೆ

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೨೧ (೪೭೪) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–೪ ನೀಡಿರುವ ವರದಿಯಲ್ಲಿ ಕಳೆದ ಒಂದು ವರ್ಷದಲ್ಲಿ ರಾಜ್ಯಾದ್ಯಂತ ಖಾಸಗಿ ಆಸ್ಪತ್ರೆಗಳಲ್ಲಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆ ಮಾಡಿರುವ ಸಂಖ್ಯೆ ಎಷ್ಟು; (ಜಿಲ್ಲಾವಾರು ವರದಿ ನೀಡುವುದು)

(ಆ) ಸಿಸೇರಿಯನ್ ಹೆರಿಗೆ ಮಾಡಲು ಇರುವ ಮಾನದಂಡವೇನು;

(ಇ) ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆಗೆ ನೀಡಿರುವ ಅವೈಜ್ಞಾನಿಕ ಕಾರಣವೇನು;

(ಈ) ಕಳೆದ ಹತ್ತು ವರ್ಷಗಳಲ್ಲಿ ಸಿಸೇರಿಯನ್ ಹೆರಿಗೆಯ ಪ್ರಮಾಣವೇನು? (ವರ್ಷವಾರು ವಿವರ ನೀಡುವುದು)

## ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭಿವೃದ್ಧಿಯ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೨೨ (೭೦೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಗಳನ್ನು ಜಾರಿಗೆ ತಂದಿದೆ; (ಯೋಜನೆ, ಅನುದಾನ, ವರ್ಷವಾರು ವಿವರ ನೀಡುವುದು)

(ಆ) ಮೂಡಿಗೆರೆ ವಿಧಾನಸಭಾ ಕ್ಷೇತ್ರಕ್ಕೆ ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ? (ಯೋಜನೆ, ಅನುದಾನ, ವರ್ಷವಾರು ವಿವರ ನೀಡುವುದು)

## ರಾಜ್ಯದಲ್ಲಿ ವಿಕಲಚೇತನರಿಗೆ ತ್ರಿಚಕ್ರ ಮೋಟಾರ್ ಸೈಕಲ್‌ಗಳ ವಿತರಣೆ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೨೩ (೭೦೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಿಕಲಚೇತನರಿಗೆ ತ್ರಿಚಕ್ರ ಮೋಟರ್ ಸೈಕಲ್‌ಗಳನ್ನು ವಿತರಿಸಲಾಗುತ್ತಿದೆಯೇ;

(ಆ) ಹಾಗಿದ್ದಲ್ಲಿ, ಇದಕ್ಕಾಗಿ ಅನುಸರಿಸುತ್ತಿರುವ ಮಾನದಂಡಗಳೇನು;

(ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ತ್ರಿಚಕ್ರ ಮೋಟಾರ್ ಸೈಕಲ್‌ಗಳನ್ನು ಮಂಜೂರು ಮಾಡಲು ಕೋರಿ ವಿಕಲಚೇತನರಿಂದ ಬಂದ ಅರ್ಜಿಗಳೆಷ್ಟು;

(ಈ) ಈ ಪೈಕಿ ಇಲ್ಲಿಯವರೆಗೆ ಎಷ್ಟು ವಿಕಲಚೇತನರಿಗೆ ತ್ರಿಚಕ್ರ ಮೋಟರ್ ಸೈಕಲ್‌ಗಳನ್ನು ವಿತರಿಸಲಾಗಿದೆ; (ವರ್ಷಾವಾರು ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಉ) ಬಾಕಿ ಉಳಿದವರಿಗೆ ತ್ರಿಚಕ್ರ ಮೋಟಾರ್ ಸೈಕಲ್ ವಿತರಿಸಲು ಹಾಕಿಕೊಂಡ ಕಾಲಮಿತಿಯೇನು?

## ಹಾವು ಕಡಿತಕ್ಕೆ ಔಷಧ ಪೂರೈಕೆ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೨೪ (೬೬೧) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ೩ ವರ್ಷಗಳಲ್ಲಿ ಹಾವು ಕಡಿತದಿಂದ ಮೃತಪಟ್ಟಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು, ವರ್ಷಾವಾರು ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಹಾವು ಕಡಿತಕ್ಕೊಳಪಟ್ಟು ಚಿಕಿತ್ಸೆ ಪಡೆದು ಗುಣಮುಖರಾದವರ ಸಂಖ್ಯೆ ಎಷ್ಟು; (ವರ್ಷಾವಾರು ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸಾರ್ವಜನಿಕ ಜಿಲ್ಲಾ ಆಸ್ಪತ್ರೆಗಳಲ್ಲಿ ಹಾವು ಕಡಿತ ಔಷಧ ಕೊರತೆಯಿಂದಾಗಿ ಸಕಾಲದಲ್ಲಿ ಚಿಕಿತ್ಸೆ ದೊರೆಯದೆ ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹಾವು ಕಡಿತಕ್ಕೆ ಒಳಗಾದ ರೋಗಿಗಳ ಜೀವ ರಕ್ಷಣೆ ಮಾಡಲು ಸರ್ಕಾರದಿಂದ ಕೈಗೊಂಡ ಕ್ರಮಗಳೇನು;

(ಈ) ಸಾರ್ವಜನಿಕ ಜಿಲ್ಲಾ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಒಳಗಾದವರಿಗೆ ಔಷಧ ಪೂರೈಕೆಗಾಗಿ ಸರ್ಕಾರದಿಂದ ಒದಗಿಸಿದ ಅನುದಾನವೆಷ್ಟು;

(ಉ) ಅನುದಾನ ಒದಗಿಸಿದ್ದಲ್ಲಿ ಹಾವು ಕಡಿತಕ್ಕೆ ಒಳಗಾದ ರೋಗಿಗಳ ಚಿಕಿತ್ಸೆಗಾಗಿ ಭರಿಸಿದ ಅನುದಾನವೆಷ್ಟು;

(ಊ) ಸರ್ಕಾರವು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಜಿಲ್ಲಾ ಆಸ್ಪತ್ರೆಯವರೆಗಿನ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ವಿಷ ನಿರೋಧಕ ಔಷಧವನ್ನು ಸರಬರಾಜು ಮಾಡಲು ಚಿಂತನೆ ನಡೆಸಿದೆಯೇ; ಇಲ್ಲದಿದ್ದಲ್ಲಿ, ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ವಿಷ ನಿರೋಧಕ ಔಷಧವನ್ನು ಸರಬರಾಜು ಮಾಡಲು ಕೂಡಲೇ ಕ್ರಮ ಜರುಗಿಸುವುದೇ?

## ಪೌಷ್ಠಿಕಾಂಶಗಳ ಕೊರತೆಯ ಬಗ್ಗೆ

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೨೫ (೬೬೦) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪೌಷ್ಠಿಕಾಂಶಗಳ ಕೊರತೆಯಿಂದ ಬಳಲುತ್ತಿರುವ ೧ ರಿಂದ ೬ ವರ್ಷ ವಯಸ್ಸಿನ ಮಕ್ಕಳ ಸರಾಸರಿ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಕುರಿತಾಗಿ ಲಭ್ಯವಿರುವ ರಾಜ್ಯದ ಸರಾಸರಿ ಎಷ್ಟು ;

(ಇ) ಪೌಷ್ಠಿಕಾಂಶ ಕೊರತೆ ಹಾಗೂ ರಕ್ತ ಹೀನತೆಯಿಂದ ಸರಾಸರಿ ಎಷ್ಟು ಗರ್ಭಿಣಿಯರು ಬಳಲುತ್ತಿದ್ದಾರೆ ; ಈ ಕುರಿತಾಗಿರುವ ರಾಜ್ಯದ ಸರಾಸರಿ ಎಷ್ಟು ;

(ಈ) ರಾಜ್ಯದಲ್ಲಿ ೧ ರಿಂದ ೬ ವರ್ಷದ ಮಕ್ಕಳು ಹಾಗೂ ಗರ್ಭಿಣಿ ಸ್ತ್ರೀಯರ ರಕ್ತ ಹೀನತೆ ಹಾಗೂ ಪೌಷ್ಠಿಕಾಂಶ ಆಹಾರದ ಕೊರತೆ ನೀಗಿಸಲು ಸರ್ಕಾರ ಯಾವ ಯೋಜನೆಯನ್ನು ಕೈಗೆತ್ತಿಕೊಂಡಿದೆ ?

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಒದಗಿಸಿರುವ ಅನುದಾನದ ಕುರಿತು

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೨೬ (೬೬೨) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬–೧೭ನೇ ಸಾಲಿನ ಆಯವ್ಯಯದಲ್ಲಿ (ಬಜೆಟ್‌ನಲ್ಲಿ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸರ್ಕಾರ ಒದಗಿಸಿರುವ ಅನುದಾನವೆಷ್ಟು ;

(ಆ) ಒದಗಿಸಿರುವ ಅನುದಾನದಲ್ಲಿ ಇಲ್ಲಿಯತನಕ ಖರ್ಚು ಮಾಡಿರುವ ಹಣವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಒದಗಿಸಿರುವ ಅನುದಾನದಲ್ಲಿ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಪ್ರತಿ ಜಿಲ್ಲೆಗೆ ನೀಡಿದ ಅನುದಾನವೆಷ್ಟು ; (ವಿವರ ನೀಡುವುದು)

(ಈ) ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ವಿದ್ಯಾರ್ಥಿ ನಿಲಯಗಳಿಗೆ ೧ ಸಮುದಾಯ ಭವನಗಳಿಗೆ ಹಾಗೂ ಇನ್ನಿತರೆ ಕಲ್ಯಾಣ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಿರುವ ಅನುದಾನವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಯಾವ ಯಾವ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಲಾಗುವುದು ;

(ಊ) ಈ ಅನುದಾನವನ್ನು ಯಾವ ಮಾನದಂಡ ಅನುಸರಿಸಿ ನೀಡಲಾಗುವುದು ?

## ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೨೭ (೭೨೭) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರವು "ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ" ಯಡಿ ರಾಜ್ಯಕ್ಕೆ ಆಹಾರ ಪದಾರ್ಥಗಳನ್ನು ಪೂರೈಕೆ ಮಾಡುತ್ತಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ರಾಜ್ಯ ಸರ್ಕಾರ ಯಾವ ಯೋಜನೆಯಡಿಯಲ್ಲಿ ರಾಜ್ಯದ ಜನರಿಗೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡುತ್ತಿದೆ ;

೨೦೧೩–೧೪ ರಿಂದ ೨೦೧೭–೧೮ ರವರೆಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಪೂರೈಕೆ ಮಾಡಿದ ಆಹಾರ ಪದಾರ್ಥಗಳು ಯಾವುವು ; ಕೇಂದ್ರ ಸರ್ಕಾರ ವಿತರಣೆ ಮಾಡಿರುವ ಪದಾರ್ಥಗಳ ಪ್ರಮಾಣ ಎಷ್ಟು ; (ವರ್ಷಾವಾರು, ಪದಾರ್ಥಗಳವಾರು ಪ್ರಮಾಣದ ಸಹಿತ ವಿವರ ನೀಡುವುದು)

(ಇ) ಆಹಾರ ಪದಾರ್ಥಗಳಾದ ಅಕ್ಕಿ, ಗೋಧಿ, ರಾಗಿ, ಜೋಳ ಮತ್ತು ಸಕ್ಕರೆ ಇವುಗಳನ್ನು ಕೇಂದ್ರ ಸರ್ಕಾರ ಪ್ರತಿ ಕೆಜಿಗೆ ಯಾವ ಯಾವ ದರಗಳಲ್ಲಿ ಖರೀದಿಸುತ್ತಿದೆ ; ಇದನ್ನು ರಾಜ್ಯ ಸರ್ಕಾರಕ್ಕೆ ಯಾವ ಯಾವ ದರದಲ್ಲಿ ವಿತರಣೆ ಮಾಡುತ್ತಿದೆ ; (ಸಂಪೂರ್ಣ ವಿವರ ನೀಡುವುದು)

(ಈ) ೨೦೧೩–೧೪ ರಿಂದ ೨೦೧೭–೧೮ರವರೆಗೆ ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ನಿಗಧಿಪಡಿಸಿದ ಅನುದಾನವೆಷ್ಟು ; ಖರ್ಚು ಮಾಡಿರುವ ಹಣ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ಮಹಿಳಾ ಮತ್ತು ಮಕ್ಕಳ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರಿಕ ಸಬಲೀಕರಣ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೨೮ (೭೨೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರ ಮಹಿಳಾ ಮತ್ತು ಮಕ್ಕಳ ಹಾಗೂ ವಿಕಲಚೇತನರ ಮತ್ತು ಹಿರಿಯು ನಾಗರಿಕರ ಸಬಲೀಕರಣಕ್ಕೆ ವಿವಿಧ ಯೋಜನೆಗಳನ್ನು ರೂಪಿಸಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಅಂತಹ ಯೋಜನೆಗಳು ಯಾವುವು ; ಆ ಯೋಜನೆಗಳಿಗೆ ೨೦೧೩–೧೪ ರಿಂದ ೨೦೧೭–೧೮ ರವರೆಗೆ ಆಯವ್ಯಯದಲ್ಲಿ ನಿಗಧಿಪಡಿಸಿದ ಮತ್ತು ಖರ್ಚು ಮಾಡಿದ ಹಣದ ಮೊತ್ತ ಎಷ್ಟು ; (ಯೋಜನೆವಾರು ಮತ್ತು ವರ್ಷಾವಾರು ವಿವರ ನೀಡುವುದು)

(ಇ) ೨೦೦೮–೦೯ ರಿಂದ ೨೦೧೭–೧೮ರವರೆಗೆ ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ವಿತರಿಸಲಾಗಿದೆ ? (ವರ್ಷಾವಾರು ಫಲಾನುಭವಿಗಳ ವಿವರ ನೀಡುವುದು)

## ವಿದ್ಯಾಸಿರಿ ಯೋಜನೆಯ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೨೯ (೬೩೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರ 'ವಿದ್ಯಾಸಿರಿ' ಯೋಜನೆಯನ್ನು ಜಾರಿಗೆ ತಂದಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಯೋಜನೆಯ ಮಾನದಂಡಗಳೇನು ; ವಿದ್ಯಾಸಿರಿ ಯೋಜನೆಯನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳೇನು ;

(ಇ) ೨೦೧೩–೧೪ ರಿಂದ ೨೦೧೭–೧೮ನೇ ಸಾಲಿನವರೆಗೆ ವಿದ್ಯಾಸಿರಿ ಯೋಜನೆಗೆ ಸರ್ಕಾರ ಮೀಸಲಿಟ್ಟ ಹಣ ಎಷ್ಟು ; ಖರ್ಚು ಮಾಡಿದ ಹಣ ಎಷ್ಟು ; ಬಾಕಿ ಹಣ ಎಷ್ಟು ;

(ಈ) ೨೦೧೩–೧೪ ರಿಂದ ೨೦೧೭–೧೮ನೇ ಸಾಲಿನವರೆಗೆ ವಿದ್ಯಾಸಿರಿ ಯೋಜನೆಯಡಿಯಲ್ಲಿನ ಫಲಾನುಭವಿಗಳ ಸಂಖ್ಯೆ ಎಷ್ಟು ;

ಯೋಜನೆಯಡಿಯಲ್ಲಿ ಪಾವತಿಸಬೇಕಾದ ಬಾಕಿ ಹಣ ಎಷ್ಟು ; ಯಾವ ದಿನದಿಂದ ಬಾಕಿ ಇದೆ ? (ಸಂಪೂರ್ಣ ವಿವರವನ್ನು ವರ್ಷಾವಾರು ನೀಡುವುದು)

## ಆರೋಗ್ಯ ಭದ್ರತಾ ಯೋಜನೆಗಳ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೦ (೭೩೬) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ "ವಾಜಪೇಯಿ ಆರೋಗ್ಯ ಶ್ರೀ" "ಆರೋಗ್ಯ ಭಾಗ್ಯ" ಇನ್ನು ಇತರೆ ಹಲವಾರು ಆರೋಗ್ಯ ಭದ್ರತಾ ಯೋಜನೆಗಳು ಜಾರಿಯಲ್ಲಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಅಂತಹ ಆರೋಗ್ಯ ಭದ್ರತಾ ಯೋಜನೆಗಳು ಯಾವುವು ; (ವಿವರ ನೀಡುವುದು)

(ಇ) ಇಂತಹ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಖಾಸಗಿ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಂಡಿರುವುದು ನಿಜವೇ ;

(ಈ) ಹಾಗಿದ್ದಲ್ಲಿ, ಖಾಸಗಿ ಆಸ್ಪತ್ರೆಗಳಿಗೆ ಇಂತಹ ಯೋಜನೆಗಳ ಹಣವನ್ನು ಪಾವತಿಸದೇ ಬಾಕಿ ಉಳಿಸಿಕೊಂಡಿರುವುದು ನಿಜವೇ ;

(ಉ) ಎಷ್ಟು ಹಣ ಬಾಕಿ ಉಳಿದಿದೆ ; ಸರ್ಕಾರದಿಂದ ಖಾಸಗಿ ಆಸ್ಪತ್ರೆಗಳಿಗೆ ಹಣ ಪಾವತಿಸದೇ ಇರುವುದರಿಂದ, ಖಾಸಗಿ ಆಸ್ಪತ್ರೆಗಳು ಯೋಜನೆಗಳನ್ನು ಕೈಬಿಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಂತಹ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು ?

## ವಿದ್ಯುತ್ ಚಿತಾಗಾರಗಳನ್ನು ಬಹುಗ್ರಾಮಗಳಿಗೊಂದರಂತೆ ನಿರ್ಮಿಸುವ ಬಗ್ಗೆ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೧ (೭೧೨) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಹುಗ್ರಾಮಗಳಿಗೊಂದು ಅಥವಾ ಜಿಲ್ಲಾ ಪಂಚಾಯತ್ ಕ್ಷೇತ್ರಕ್ಕೊಂದರಂತೆ ವಿದ್ಯುತ್ ಚಿತಾಗಾರ ನಿರ್ಮಿಸುವ ಉದ್ದೇಶವು ಸರ್ಕಾರದ ಮುಂದಿದೆಯೇ ;

(ಆ) ನಗರೀಕರಣ, ಕಟ್ಟಿಗೆಯ ಕೊರತೆ, ಮರಗಳ ನಾಶಗಳನ್ನು ಪರಿಗಣಿಸಿದ್ದಲ್ಲಿ, ವಿದ್ಯುತ್ ಚಿತಾಗಾರಗಳು ಅಗತ್ಯವೆಂದು ಸರ್ಕಾರವು ಪರಿಗಣಿಸುವುದೇ ; (ಹೌದಾದಲ್ಲಿ, ಸರ್ಕಾರದ ಕ್ರಮವೇನು)

(ಇ) ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ಬಳಸಲು ಅವಕಾಶ ನೀಡಲಾಗುವುದೇ ; ಇಲ್ಲವಾದಲ್ಲಿ, ಬದಲಿ ಅನುದಾನ ಒದಗಿಸಲು ಕ್ರಮ ವಹಿಸಲಾಗುವುದೇ ?

## ವಿಕಲಚೇತನರ ತರಬೇತಿ ಸಂಸ್ಥೆಗಳು ಹಾಗೂ ವಿಕಲಚೇತನರಿಗೆ ಶೇ.೩ರ ಅನುದಾನದ ಬಗ್ಗೆ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೨ (೭೧೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಕಲಚೇತನರಿಗೆ ಶಿಕ್ಷಣ, ತರಬೇತಿ ಮತ್ತು ಆರೈಕೆ ನೀಡುತ್ತಿರುವ ಸಂಸ್ಥೆಗಳು

ಯಾವುವು ; ಅವುಗಳಲ್ಲಿ ಖಾಸಗಿ ಸಂಸ್ಥೆಗಳು, ಖಾಸಗಿ ಅನುದಾನಿತ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳು ಎಷ್ಟು ; ಮತ್ತು ಯಾವುವು ;

(ಆ) ವಿವಿಧ ರೀತಿಯ ವಿಕಲಚೇತನರಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಸೌಲಭ್ಯಗಳು ಯಾವುವು ; ಇವುಗಳಿಗೆ ಕಳೆದ ೩ ವರ್ಷಗಳಲ್ಲಿ ಮಾಡಲಾಗಿರುವ ವೆಚ್ಚವೆಷ್ಟು ; (ಜಿಲ್ಲಾವಾರು, ವರ್ಷಾವಾರು ವಿವರ ನೀಡುವುದು)

(ಇ) ವಿವಿಧ ಇಲಾಖೆಗಳ, ಯೋಜನೆಗಳ ಅನುದಾನಗಳಲ್ಲಿ ಕಡ್ಡಾಯವಾಗಿ ಮೀಸಲಿರಿಸಬೇಕಾದ ಶೇ.೩ರ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಲಾಗುತ್ತಿದೆಯೇ ; ಇವುಗಳ ಮೇಲೆ ನಿಯಂತ್ರಣ/ನಿಗಾವಹಿಸಲು ಇಲಾಖೆಯು ತೆಗೆದುಕೊಂಡ ಕ್ರಮಗಳೇನು ?

## ಮುಖ್ಯಮಂತ್ರಿಗಳ ಅನಿಲಭಾಗ್ಯ ಯೋಜನೆಯ ಕುರಿತು

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೩ (೭೧೪) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮುಖ್ಯಮಂತ್ರಿಗಳ ಅನಿಲಭಾಗ್ಯ ಯೋಜನೆ ಯಾರಿಗೆ ಅನ್ವಯವಾಗುತ್ತದೆ ; ಫಲಾನುಭವಿಗಳ ಆಯ್ಕೆಯನ್ನು ಹೇಗೆ ಮಾಡಲಾಗುತ್ತದೆ ; ಸದರಿ ಯೋಜನೆಯಲ್ಲಿ ಒದಗಿಸುವ ಸೌಲಭ್ಯಗಳೇನು ; (ಪ್ರಕ್ರಿಯೆಗಳ ವಿವರ ನೀಡುವುದು)

(ಆ) ರಾಜ್ಯದಲ್ಲಿ ಇದುವರೆಗೆ ಎಷ್ಟು ಗ್ರಾಮಗಳನ್ನು ಸಂಪೂರ್ಣ ಹೊಗೆ ಮುಕ್ತ ಎಂದು ಘೋಷಿಸಲಾಗಿದೆ ; ಅವು ಯಾವುವು ;

(ಇ) ರಾಜ್ಯದಲ್ಲಿ ಮುಖ್ಯಮಂತ್ರಿ ಅನಿಲಭಾಗ್ಯ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳಿಗೆ ತಲುಪಿಸಲು ಉದ್ದೇಶಿಸಲಾಗಿದೆ ; ಮತ್ತು ಕಾಲಮಿತಿ ಎಷ್ಟು ?

## ನಿಗಧಿತ ಕಾಲಮಿತಿಯಲ್ಲಿ ಕಾರ್ಡ್‌ಗಳನ್ನು ವಿತರಿಸುವುದು ಹಾಗೂ ಸಮರ್ಪಕವಾಗಿ ವಿತರಣೆ ಬಗ್ಗೆ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೫ (೭೧೩) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ೨ ವರ್ಷಗಳಲ್ಲಿ ಹೊಸ ಬಿ.ಪಿ.ಎಲ್. ಕಾರ್ಡ್‌ಗಳಿಗಾಗಿ ಹಾಗೂ ಬಿ.ಪಿ.ಎಲ್ ಕಾರ್ಡ್‌ಗಳ ತಿದ್ದುಪಡಿಗಾಗಿ ಎಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ ; ಇವುಗಳಲ್ಲಿ ಎಷ್ಟು ಕಾರ್ಡ್‌ಗಳು ಮಂಜೂರಾತಿಯಾಗಿವೆ ; ಮಂಜೂರಾತಿಯಾಗಿ ವಿತರಿಸಿದ ಕಾರ್ಡ್‌ಗಳ ಸಂಖ್ಯೆ ಎಷ್ಟು ; ತಿರಸ್ಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು ; ವಿತರಣೆಗೆ ಬಾಕಿ ಇರುವ ಕಾರ್ಡ್‌ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಹೊಸ ಹಾಗೂ ತಿದ್ದುಪಡಿ ಕಾರ್ಡ್‌ಗಳನ್ನು ಪಡೆಯಲು ಆರೆಂಟು ತಿಂಗಳುಗಳ ಕಾಲ ಅನಿಶ್ಚಿತತೆಯಿಂದ ಕಾಯುವುದನ್ನು ತಪ್ಪಿಸಲು ಕಾಲಮಿತಿಯೊಳಗೆ ಸಕಾಲ ಯೋಜನೆಯಲ್ಲಿ ಕಾರ್ಡ್ ವಿತರಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಯಾವುದು ;

(ಇ) ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಆರು ತಿಂಗಳಲ್ಲಿ ಪ್ರತಿ ತಾಲ್ಲೂಕಿನಲ್ಲಿ ಕೊಡಲಾದ ಪಡಿತರದ

ಪ್ರಮಾಣವೆಷ್ಟು ; (ತಾಲ್ಲೂಕುವಾರು, ತಿಂಗಳುವಾರು ವಿವರ ನೀಡುವುದು) ವ್ಯತ್ಯಾಸಗಳಿದ್ದಲ್ಲಿ, ಕಾರಣಗಳೇನು ;

(ಈ) ಪಡಿತರ ವಿತರಣೆಗೆ ಬಯೋಮೆಟ್ರಿಕ್ ನೆಟ್‌ವರ್ಕ್ ಸಮಸ್ಯೆಯಿಂದಾಗಿ ಜನರು ಹಲವಾರು ಬಾರಿ ವಿತರಣಾ ಕೇಂದ್ರಗಳಿಗೆ ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬೆರಳಚ್ಚು ಹೊಂದಾಣಿಕೆಯಾಗದೆ ಪಡಿತರ ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇವುಗಳ ಬಗ್ಗೆ ಸರ್ಕಾರದ ಕ್ರಮವೇನು ?

## ರಾಜ್ಯದಲ್ಲಿ ಬಿಪಿಎಲ್ ಪಡಿತರ ಕಾರ್ಡ್‌ಗಳನ್ನು ಹೊಂದಿರುವವರ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೬ (೪೬೭) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಿಪಿಎಲ್ ಪಡಿತರ ಕಾರ್ಡ್‌ಗಳನ್ನು ಹೊಂದಿರುವವರ ಸಂಖ್ಯೆ ಎಷ್ಟು ;

(ಆ) ೨೦೧೩ ರಿಂದ ಇಲ್ಲಿಯವರೆಗೆ ಎಷ್ಟು ಬಿಪಿಎಲ್ ಕಾರ್ಡ್‌ಗಳನ್ನು ಹೊಸದಾಗಿ ನೀಡಲಾಗಿದೆ ;

(ಇ) ಬಿಪಿಎಲ್ ಪಡಿತರ ಕಾರ್ಡ್‌ಗಾಗಿ ಅರ್ಜಿಯನ್ನು ಸಲ್ಲಿಸಿರುವವರ ಸಂಖ್ಯೆ ಎಷ್ಟು ; ಬಾಕಿ ಇರುವ ಅರ್ಜಿಗಳು ಎಷ್ಟು ; (ವಿವರ ನೀಡುವುದು)

(ಈ) ಬಾಕಿ ಉಳಿದಿರುವ ಅರ್ಜಿಗಳ ವಿಲೇವಾರಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಉ) ಎಪಿಎಲ್ ಕಾರ್ಡ್‌ಗಳನ್ನು ವಿತರಣೆ ಮಾಡಲಾಗುತ್ತಿದೆಯೇ ? (ವಿವರವನ್ನು ನೀಡುವುದು)

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಹಾಸ್ಟಲ್‌ಗಳ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೭ (೪೬೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಹಾಸ್ಟೆಲ್‌ಗಳಲ್ಲಿ ಎಷ್ಟು ಜನ ವಾರ್ಡನ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ ; ಪ್ರತಿ ಹಾಸ್ಟೆಲ್‌ಗಳಲ್ಲಿ ವಾರ್ಡನ್‌ಗಳು ಇದ್ದಾರೆಯೇ ; ಕಡಿಮೆ ಇದ್ದಲ್ಲಿ ಅದರ ವಿವರವನ್ನು ನೀಡುವುದು ;

(ಇ) ಹೊಸದಾಗಿ ವಾರ್ಡನ್‌ಗಳನ್ನು ನೇಮಕ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಸಮಾಜ ಕಲ್ಯಾಣ ಇಲಾಖೆಯಲ್ಲಿ ಹೊರಗುತ್ತಿಗೆದಾರರಾಗಿ ಕೆಲಸ ನಿರ್ವಹಿಸುತ್ತಿರುವವರ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೮ (೪೬೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಹೊರಗುತ್ತಿಗೆದಾರರಾಗಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಹೊರಗುತ್ತಿಗೆದಾರರನ್ನು ಪೂರೈಸುತ್ತಿರುವ ಮ್ಯಾನ್‌ಪವರ್ ಏಜೆನ್ಸಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಮ್ಯಾನ್‌ಪವರ್ ಏಜೆನ್ಸಿಗಳು, ಹೊರಗುತ್ತಿಗೆದಾರರಾಗಿ ಕೆಲಸ ಮಾಡುತ್ತಿರುವವರ ಇಎಸ್‌ಐ ಮತ್ತು ಪಿಎಫ್‌ಗಳನ್ನು ಇಲಾಖೆಗೆ ಜಮಾ ಮಾಡದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಂತಹವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ?

## ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಹಾಸ್ಟೆಲ್‌ಗಳ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೯ (೪೬೫) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಹಾಸ್ಟೆಲ್‌ಗಳಲ್ಲಿ ಎಷ್ಟು ಜನ ವಾರ್ಡನ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ ; ಪ್ರತಿ ಹಾಸ್ಟೆಲ್‌ಗಳಲ್ಲಿ ವಾರ್ಡನ್‌ಗಳು ಇದ್ದಾರೆಯೇ ; ಕಡಿಮೆ ಇದ್ದಲ್ಲಿ, ಅದರ ವಿವರವನ್ನು ನೀಡುವುದು ;

(ಇ) ಹೊಸದಾಗಿ ವಾರ್ಡನ್‌ಗಳನ್ನು ನೇಮಕ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

## ಅಂಗನವಾಡಿ ಕೇಂದ್ರಗಳಿಗೆ ವಿತರಿಸುತ್ತಿರುವ ಆಹಾರ ಸಾಮಗ್ರಿಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೦ (೪೩೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಯಾವ ರೀತಿಯಲ್ಲಿ ಆಹಾರ ಸಾಮಗ್ರಿಗಳು ವಿತರಣೆಯಾಗುತ್ತಿದೆ ; ಈ ವಿತರಣೆ ಕಾರ್ಯವನ್ನು ಟೆಂಡರ್ ಮುಖಾಂತರ ನೀಡಲಾಗಿದೆಯೇ ; ಇಲ್ಲವಾದಲ್ಲಿ, ಯಾವ ರೀತಿ ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಮಹಿಳಾ ಸಂಘಗಳಿಗೆ ನೀಡಲಾಗುತ್ತಿದ್ದಲ್ಲಿ, ಯಾವ ಮಹಿಳಾ ಸಂಘಗಳಿಗೆ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಾಗ್ರಿಗಳನ್ನು ಮಧ್ಯವರ್ತಿಗಳ ಮೂಲಕ ನೀಡಲಾಗುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಸರ್ಕಾರವೇ ನೇರವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಆಹಾರ ಸಾಮಗ್ರಿಗಳನ್ನು ವಿತರಿಸಲು ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

(ಉ) ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಯಾವ ದರದಲ್ಲಿ ನೀಡಲಾಗುತ್ತಿದೆ ; ೨೦೧೩ ರಿಂದ ೨೦೧೭ರವರೆಗೆ

ಧಾರವಾಡ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಒಟ್ಟು ಎಷ್ಟು ಆಹಾರ ಸಾಮಗ್ರಿಗಳನ್ನು ವಿತರಿಸಲಾಗಿದೆ ? (ವರ್ಷಾವಾರು, ಸಾಮಗ್ರಿವಾರು ಸಂಪೂರ್ಣ ಮಾಹಿತಿ ನೀಡುವುದು)

## ಲೋಕಸಭಾ ಸದಸ್ಯರ ಹಾಗೂ ಶಾಸಕರ ಅನುದಾನದ ಕಾಮಗಾರಿಗಳು ವಿಳಂಬವಾಗುತ್ತಿರುವ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೧ (೭೧೫) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಲೋಕಸಭಾ ಸದಸ್ಯರ, ವಿಧಾನ ಸಭಾ ಸದಸ್ಯರ ಹಾಗೂ ವಿಧಾನ ಪರಿಷತ್ ಸದಸ್ಯರ ಕ್ಷೇತ್ರಾಭಿವೃದ್ಧಿ ಅನುದಾನವನ್ನು ನಗರಗಳ ಅಭಿವೃದ್ಧಿಗಾಗಿ ಶಾಸಕರ ಅನುದಾನದೊಂದಿಗೆ ಪಾಲಿಕೆಯ ಅನುದಾನದ ಜೊತೆ ಹೊಂದಾಣಿಕೆ ಅನುದಾನ ನೀಡುತ್ತಿದ್ದು, ಸದರ ಅನುದಾನದ ಬಳಕೆ ಹಾಗೂ ಕಾಮಗಾರಿಗಳ ಟೆಂಡರ್ ಕರೆಯುವ ಪ್ರಕ್ರಿಯೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ೨೦೧೬ ರಿಂದ ೨೦೧೮ರವರೆಗೆ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಲ್ಲಿ ಹೊಂದಾಣಿಕೆಯಲ್ಲಿ ನೀಡಿದ್ದ ಲೋಕಸಭಾ ಸದಸ್ಯರು, ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರ ಕ್ಷೇತ್ರಾಭಿವೃದ್ಧಿ ಅನುದಾನ ಎಷ್ಟು ; ಅನುದಾನಕ್ಕೆ ಈವರೆಗೆ ಟೆಂಡರ್ ಕರೆಯಲಾಗಿದೆ ಹಾಗೂ ಟೆಂಡರ್ ಕರೆಯಲು ಬಾಕಿಯಿರುವ ಅನುದಾನ ಎಷ್ಟು ;

(ಇ) ಈವರೆಗೆ ಟೆಂಡರ್ ಕರೆಯದಿದ್ದರೆ, ಇದಕ್ಕೆ ಕಾರಣವೇನು ; ಟೆಂಡರ್ ಕರೆಯದಿರುವ ಕಾಮಗಾರಿಗಳ ವಿವರ ನೀಡುವುದು ;

(ಈ) ಸದರಿ ಅನುದಾನ ಸರಿಯಾಗಿ ವಿನಿಯೋಗಿಸಲು ಪಾಲಿಕೆಯಲ್ಲಿ ಒಂದು ಪ್ರತ್ಯೇಕವಾದ ವಿಭಾಗ (Wing) ಸ್ಥಾಪಿಸಿ, ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಲು ಸರ್ಕಾರವು ಯೋಜಿಸಿದೆಯೇ ; ಹಾಗಿದ್ದಲ್ಲಿ, ಇದರ ವಿವರ ನೀಡುವುದು)

(ಉ) ಇಲ್ಲವಾದಲ್ಲಿ, ಇದನ್ನು ಯಾವಾಗ ಪ್ರಾರಂಭಿಸಲಾಗುವುದು ? (ವಿವರ ನೀಡುವುದು)

## ಬಯಲುಸೀಮೆ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೨ (೭೯) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳ ವತಿಯಿಂದ ನೀಡಲಾಗಿರುವ ಒಟ್ಟು ಅನುದಾನ ಎಷ್ಟು ; (ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರು ಒಳಗೊಂಡಂತೆ ತಾಲ್ಲೂಕುವಾರು, ವರ್ಷಾವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ೩ ಜಿಲ್ಲೆಗಳಲ್ಲಿ ಅನುದಾನಕ್ಕೆ ಅನುಗುಣವಾಗಿ ಪ್ರಸ್ತಾಪಿಸಲಾಗಿರುವ ಕಾಮಗಾರಿಗಳಾವುವು ; (ತಾಲ್ಲೂಕುವಾರು, ಸಂಪೂರ್ಣ ವಿವರ ನೀಡುವುದು)

(ಇ) ಈ ಜಿಲ್ಲೆಗಳಲ್ಲಿ ಪ್ರಸ್ತಾಪಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇದುವರೆಗೆ ಕೈಗೊಂಡಿರುವ ಕ್ರಮಗಳೇನು ; ಅನುಷ್ಠಾನಗೊಳಿಸುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಈ) ನಿರ್ದಿಷ್ಟ ಕಾಲಮಿತಿಯೊಳಗಾಗಿ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದೇ ? (ವಿವರ ನೀಡುವುದು)

## ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಸಿಬ್ಬಂದಿ ವೇತನದ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೩ (೪೫೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಐಸಿಪಿಎಸ್ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಎಷ್ಟು ಹುದ್ದೆಗಳು ರಾಜ್ಯದಲ್ಲಿ ಸೃಜಿಸಲ್ಪಟ್ಟಿವೆ ಹಾಗೂ ಅವುಗಳಿಗೆ ನಿಗಧಿಪಡಿಸಿರುವ ಗೌರವಧನ ಎಷ್ಟು ; ಸದರಿ ಸೃಜಿಸಲ್ಪಟ್ಟಿರುವ ಹುದ್ದೆಗಳ ಭರ್ತಿಗೆ ಕೈಗೊಂಡಿರುವ ಕ್ರಮಗಳೇನು ; ಆಗಿದ್ದಲ್ಲಿ ಯಾವ ಮೂಲದ ಮೂಲಕ ಭರ್ತಿ ಮಾಡಲಾಗಿದೆ ; ಹೊರಗುತ್ತಿಗೆ ಅಥವಾ ನೇರನೇಮಕಾತಿಯ ವಿವರ ನೀಡುವುದು ; (ಪೂರ್ಣ ಮಾಹಿತಿ ನೀಡುವುದು)

(ಆ) ಹೊರಗುತ್ತಿಗೆಯಲ್ಲಿ ಸದರಿ ಹುದ್ದೆಗಳಿಗೆ ನಿಗಧಿಪಡಿಸಿರುವ ಗೌರವಧನ ಕನಿಷ್ಠ ವೇತನದರಗಳನ್ವಯ ಸರಿಸಮಾನವಾಗಿದೆಯೇ ; ಇಲ್ಲದಿದ್ದರೆ ಅದನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು ; (ಪೂರ್ಣ ವಿವರ ನೀಡುವುದು)

(ಇ) ಹುದ್ದೆವಾರು ನಿಗಧಿ ಪಡಿಸಿರುವ ಗೌರವಧನದಲ್ಲಿ ಸಿಬ್ಬಂದಿಯವರ ಸೇವಾ ಭದ್ರತೆಗಾಗಿ ಇ.ಎಸ್.ಐ, ಪಿ.ಎಫ್, ಸರ್ವಿಸ್ ಟ್ಯಾಕ್ಸ್, ಸರ್ವಿಸ್ ಚಾರ್ಜ್‌ಗಳನ್ನು ಸರ್ಕಾರವೇ ಭರಿಸುತ್ತಿದೆಯೇ ; ಅಥವಾ ನಿಗಧಿಪಡಿಸಿರುವ ಗೌರವಧನದಲ್ಲಿಯೇ ಕಡಿತ ಮಾಡಲಾಗುತ್ತಿದೇ ; ಇದರ ಕಡಿತದ ಪ್ರಮಾಣ ಮತ್ತು ವಿವರವಾದ ಮಾಹಿತಿಯನ್ನು ನೀಡುವುದು ;

(ಈ) ಮಾನವ ಸಂಪನ್ಮೂಲ ಏಜನ್ಸಿಯವರು ಸಿಬ್ಬಂದಿಯವರ ಗೌರವಧನದಲ್ಲಿಯೇ ಕಟಾಯಿಸುವುದಾದಲ್ಲಿ ಇದನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಇದನ್ನು ತಡೆಗಟ್ಟಲು ನೇರವಾಗಿ ಸರ್ಕಾರದ ಮೂಲಕವೇ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ ; (ವಿವರವಾದ ಮಾಹಿತಿ ನೀಡುವುದು)

(ಉ) ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಕೇಂದ್ರ ಕಛೇರಿಗೆ ಎಷ್ಟು ಹುದ್ದೆಗಳನ್ನು ಹೊರಗುತ್ತಿಗೆ ಮೇಲೆ ಪಡೆಯಲಾಗಿದೆ ; ಅವುಗಳು ಯಾವುವು ; ಈ ಸಿಬ್ಬಂದಿಗಳಿಗೆ ಇ.ಎಸ್.ಐ, ಪಿ.ಎಫ್, ಸರ್ವಿಸ್ ಟ್ಯಾಕ್ಸ್, ಸರ್ವಿಸ್ ಚಾರ್ಜ್‌ಗಳನ್ನು ಯಾವ ಮೂಲದಿಂದ ಭರಿಸಲಾಗುತ್ತಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಊ) ಇದನ್ನು ಸರ್ಕಾರವೇ ಭರಿಸುತ್ತಿದೆಯೇ ; ಹಾಗಿದ್ದಲ್ಲಿ, ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳಿಗೂ ಸಹ ಇದೇ ಕ್ರಮ ಅನುಸರಿಸದಿರಲು ಕಾರಣಗಳೇನು ? (ಸಂಪೂರ್ಣ ವಿವರ ನೀಡುವುದು)

## ಕರ್ನಾಟಕ ಮಹರ್ಷಿ ವಾಲ್ಮೀಕಿ ನಿಗಮದಿಂದ ನೀಡುವ ಅನುದಾನಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೪ (೭೩೭) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗದವರಿಗೆ ನೀಡಲಾಗುತ್ತಿರುವ ವೈಯಕ್ತಿಕ ಹಾಗೂ ಸಾಮೂಹಿಕ ಸೌಲಭ್ಯಗಳು ಯಾವುವು ; (ಯೋಜನೆವಾರು ಸಂಪೂರ್ಣ ವಿವರ ನೀಡುವುದು)

(ಆ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗದವರಿಗೆ ಯಾವ ಯೋಜನೆಗಳಡಿಯಲ್ಲಿ ಎಷ್ಟು ಸೌಲಭ್ಯಗಳನ್ನು ಕಳೆದ ಮೂರು ವರ್ಷಗಳಿಂದ ವಿತರಿಸಲಾಗಿದೆ ;

(ಇ) ವಿವಿಧ ಯೋಜನೆಗಳಡಿಯಲ್ಲಿ ಬಾಕಿ ಉಳಿದಿರುವ ಅರ್ಜಿಗಳೆಷ್ಟು ; ಅವುಗಳು ಯಾವುವು ? (ಜಿಲ್ಲಾವಾರು, ಯೋಜನೆವಾರು ಸಂಪೂರ್ಣ ವಿವರ ನೀಡುವುದು)

## ಆಶಾಕಿರಣ ಅಂಧ ಶಾಲೆಯಲ್ಲಿ ಮಂಜೂರಾದ ಹುದ್ದೆಗಳ ಬಗ್ಗೆ

**ಶ್ರೀ ಪ್ರಾಣೇಶ್ .ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೫ (೪೪೦) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ನಗರದ ಕೆಂಪನಹಳ್ಳಿಯಲ್ಲಿ ಇರುವ "ಆಶಾಕಿರಣ" ಅಂಧ ಮಕ್ಕಳ ವಸತಿಯುತ ಪಾಠಶಾಲೆಯಲ್ಲಿ ಮಂಜೂರಾಗಿದ್ದ ಹುದ್ದೆಗಳ ಪೈಕಿ ೪ ಶಿಕ್ಷಕರು ಮತ್ತು ೧ ಶಿಕ್ಷಕೇತರ ಒಟ್ಟು ೫

ಹುದ್ದೆಗಳು ಖಾಲಿಯಾಗಿದ್ದು, ಇವುಗಳ ಭರ್ತಿಗೆ ಸರ್ಕಾರ ಮತ್ತು ಇಲಾಖೆಯಿಂದ ಅನುಮತಿ ಕೋರಲಾಗಿದೇ ;ಹಾಗಾದರೆ, ಅನುಮತಿ ನೀಡದಿರಲು ಕಾರಣವೇನು ;

(ಆ) ಶಿಕ್ಷಕರ ಕೊರತೆಯಿಂದ ಅಂಧ ಮಕ್ಕಳಿಗೆ ಪಾಠ ಮಾಡಲು ತೊಂದರೆಯಾಗುವುದಿಲ್ಲವೇ ; ಖಾಲಿ ಇರುವ ಹುದ್ದೆಗಳ ಭರ್ತಿಗೆ ಅನುಮತಿ ನೀಡದೇ ಇರಲು ಪ್ರಮುಖ ಕಾರಣವೇನು ; (ವಿವರ ನೀಡುವುದು)

(ಇ) ಚಿಕ್ಕಮಗಳೂರು ನಗರದ ಕೆಂಪನಹಳ್ಳಿಯಲ್ಲಿ ಇರುವ "ಆಶಾಕಿರಣ" ಅಂಧ ಮಕ್ಕಳ ವಸತಿಯುತ ಪಾಠಶಾಲೆಯಲ್ಲಿ ವಾಚ್‌ಮನ್ ಹಾಗೂ ಸ್ವೀಪರ್ ಆಗಿ ಕಳೆದ ೧೬ ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಖಾಯಂ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಸದರಿಯವರುಗಳನ್ನು ಖಾಯಂ ಮಾಡಲಾಗುವುದು ಯಾವಾಗ ? (ವಿವರ ನೀಡುವುದು)

## ಐತಿಹಾಸಿಕ ಬೀದರ್ ಕೋಟೆಗಳ ನಿರ್ವಹಣೆ ಕುರಿತು

**ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೪೬ (೪೩೬) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಇತಿಹಾಸ ಬಿಂಬಿಸುವ ಐತಿಹಾಸಿಕ ನಾಲ್ಕು ಕೋಟೆಗಳನ್ನು ಮಾದರಿ ಪ್ರವಾಸಿ ತಾಣಗಳಾಗಿ ರೂಪಿಸಲಾಗಿದೆಯೇ ; ಇದನ್ನು ಯಾವಾಗ ರೂಪಿಸಲಾಯಿತು ; (ಮಾಹಿತಿ ನೀಡುವುದು)

(ಆ) ಈ ಯೋಜನೆಯು ಎಷ್ಟು ಮೊತ್ತದಲ್ಲಿ ರೂಪುಗೊಂಡಿದೆ ; ಇದಕ್ಕೆ ಈವರೆಗೆ ಎಷ್ಟು ಮೊತ್ತ ಬಿಡುಗಡೆಗೊಳಿಸಲಾಗಿದೆ ;

(ಇ) ಈ ಯೋಜನೆಯಡಿ ಈವರೆಗೆ ಕೈಗೆತ್ತಿಕೊಂಡಿರುವ ಕಾಮಗಾರಿಗಳಾವುವು ; (ಸಂಪೂರ್ಣ ವಿವರ ನೀಡುವುದು)

(ಈ) ಈ ಐತಿಹಾಸಿಕ ಕೋಟೆಗಳ ಮಹತ್ವ ಹಾಗೂ ಮಾಹಿತಿಯನ್ನು ರಾಜ್ಯದ ಹಾಗೂ ಹೊರ ರಾಜ್ಯದ ಸಾರ್ವಜನಿಕರಿಗೆ ತಲುಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಉ) ಈ ಐತಿಹಾಸಿಕ ಕೋಟೆಗಳ ಐತಿಹ್ಯ ಹಾಗೂ ಸ್ವಚ್ಛತೆಯನ್ನು ಕಾಪಾಡಲು ಈವರೆಗೆ ರೂಪಿಸಲಾಗಿರುವ ಕ್ರಮಗಳೇನು ; ಇದಕ್ಕಾಗಿ ಕಳೆದ ೧೦ ವರ್ಷಗಳಲ್ಲಿ ಯಾವ ಉದ್ದೇಶಕ್ಕಾಗಿ ಹಣ ಖರ್ಚಾಗಿದೆ ? (ಹಣದ ಲೆಕ್ಕಶೀರ್ಷಿಕೆಗಳೊಂದಿಗೆ ಸಂಪೂರ್ಣ ವಿವರ ನೀಡುವುದು)

## ಉಬ್ಬು ಚಿತ್ರಗಳ ನಿರ್ವಹಣೆ ಮಾಡದಿರುವ ಬಗ್ಗೆ

**ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೪೭ (೪೩೮) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಐತಿಹ್ಯ ಹಾಗೂ ಸಂಸ್ಕೃತಿಯನ್ನು ಸಾರುವ ಉಬ್ಬು ಚಿತ್ರಗಳನ್ನು ಯಾವ ಸ್ಥಳಗಳಲ್ಲಿ ಮಾಡಲಾಗಿದೆ ; ಇದನ್ನು ಯಾವಾಗ ಕೈಗೊಳ್ಳಲಾಯಿತು ;ಇದಕ್ಕಾಗಿ ಖರ್ಚಾಗಿರುವ ಹಣವೆಷ್ಟು ; ಇದನ್ನು ಯಾವ ಸಹಯೋಗದೊಂದಿಗೆ ನಿರ್ಮಿಸಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ಈ ಉಬ್ಬು ಚಿತ್ರಗಳಲ್ಲಿ ಬಿಂಬಿತವಾಗಿರುವ ಚಿತ್ರಗಳ ವಿವರ ನೀಡುವುದು ; ಇದರ ಸಮರ್ಪಕ ನಿರ್ವಹಣೆ ಮಾಡದೇ ವಿಲಕ್ಷಣಕ್ಕೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದರ ನಿರ್ವಹಣೆಗೆ ಈವರೆಗೆ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಈ ಉಬ್ಬು ಚಿತ್ರಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದ ಅಧಿಕಾರಿಗಳ ವಿರುದ್ಧ ಈವರೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ಅಂಗನವಾಡಿ ಕೇಂದ್ರಗಳಲ್ಲಿ ಸರಿಯಾದ ಸಾಮಗ್ರಿಗಳು ವಿತರಿಸದಿರುವ ಬಗ್ಗೆ

**ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೪೮ (೪೪೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಯಾವ ರೀತಿಯಲ್ಲಿ ಆಹಾರ ಸಾಮಗ್ರಿಗಳು ವಿತರಣೆಯಾಗುತ್ತಿದೆ ; ಈ ವಿತರಣೆ ಕಾರ್ಯವನ್ನು ಟೆಂಡರ್ ಮುಖಾಂತರ ನೀಡಲಾಗಿದೆಯೇ ; ಇಲ್ಲವಾದಲ್ಲಿ, ಯಾವ ರೀತಿ ನೀಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಮಹಿಳಾ ಸಂಘಗಳಿಗೆ ನೀಡಲಾಗುತ್ತಿದ್ದರೆ, ಯಾವ ಮಹಿಳಾ ಸಂಘಗಳಿಗೆ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಮಧ್ಯವರ್ತಿಗಳ ಮೂಲಕ ನೀಡಲಾಗುತ್ತಿದೆ ಎಂಬ ದೂರುಗಳು ಕೇಳಿ

ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಸರ್ಕಾರವೇ ನೇರವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಆಹಾರ ಸಾಮಗ್ರಿಗಳನ್ನು ವಿತರಿಸಲು ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

(ಉ) ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಯಾವ ದರದಲ್ಲಿ ನೀಡಲಾಗುತ್ತಿದೆ ; ೨೦೧೩ ರಿಂದ ೨೦೧೭ರವರೆಗೆ ಬೀದರ್ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಒಟ್ಟು ಎಷ್ಟು ಆಹಾರ ಸಾಮಗ್ರಿಗಳನ್ನು ವಿತರಿಸಲಾಗಿದೆ ; (ವರ್ಷಾವಾರು, ಸಾಮಗ್ರಿವಾರು ಸಂಪೂರ್ಣ ಮಾಹಿತಿ ನೀಡುವುದು)

(ಊ) ಕೆಲವು ಕಡೆಗಳಲ್ಲಿ ಈ ಆಹಾರ ಸಾಮಗ್ರಿಗಳನ್ನು ಅಂಗನವಾಡಿ ಕೇಂದ್ರಗಳಲ್ಲಿ ಸರಿಯಾಗಿ ವಿತರಣೆ ಮಾಡದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇಂತಹವರುಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ ?

## ನಿಯೋಜನೆ ಅವಧಿ ಮುಗಿದರು ಸಂಸ್ಥೆಯಲ್ಲಿ ಮುಂದುವರಿಸುತ್ತಿರುವ ಬಗ್ಗೆ

**ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೪೯ (೪೩೭) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಆರೋಗ್ಯ ಇಲಾಖೆಯಿಂದ ನಿಯೋಜನೆ ಮೇರೆಗೆ ನೇಮಕವಾಗಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಹುದ್ದೆವಾರು, ಅವರ ಮಾತೃ ಇಲಾಖೆ, ಅವಧಿ ಹಾಗೂ ಇವರುಗಳ ನಿಯೋಜನೆಯ ಕಾಲಮಿತಿಯ ಸಂಪೂರ್ಣ ವಿವರ ನೀಡುವುದು)

(ಆ) ಈ ರೀತಿ ನಿಯೋಜನೆಗೊಂಡವರ ಕಾಲಾವಧಿಯು ಮುಗಿದಿದ್ದರೂ, ಇನ್ನೂ ಸಂಸ್ಥೆಯಲ್ಲೇ ಕರ್ತವ್ಯ ನಿರ್ವಹಿಸುತ್ತಿರಲು ಕಾರಣಗಳೇನು; (ಸಿಬ್ಬಂದಿವಾರು ಸಂಪೂರ್ಣ ವಿವರ ನೀಡುವುದು)

(ಇ) ನಿಯೋಜನೆ ಮೇರೆಗೆ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಭ್ರಷ್ಟಾಚಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹವರುಗಳ ವಿವರ ಹಾಗೂ ಅವರ ವಿರುದ್ಧ ಈವರೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ; (ಸಂಪೂರ್ಣ ವಿವರ ನೀಡುವುದು)

(ಈ) ಇಂತಹ ಸಿಬ್ಬಂದಿಗಳನ್ನು ಅವರ ಮಾತೃ ಇಲಾಖೆಗೆ ವಾಪಸ್ಸು ಕಳುಹಿಸಿ, ತದನಂತರ ಮತ್ತೆ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಟ್ಟಿರಲು ಕಾರಣವೇನು ; ಈ ಕುರಿತು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಪಡಿತರ ಅಂಗಡಿಗಳಲ್ಲಿ ಕೊಳೆತ ಆಹಾರ ಧಾನ್ಯಗಳನ್ನು ವಿತರಿಸುತ್ತಿರುವ ಬಗ್ಗೆ

**ಶ್ರೀ ರಘುನಾಥರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೫೦ (೪೩೯) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಪಡಿತರ ಚೀಟಿಗಳು ಚಾಲ್ತಿಯಲ್ಲಿವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಬೀದರ್ ಜಿಲ್ಲೆಯಲ್ಲಿ ಪಡಿತರ ಅಂಗಡಿಗಳಲ್ಲಿ ಫಲಾನುಭವಿಗಳು ಥಂಬಿಂಗ್ ಮಾಡಲು ಹಣ ಪಡೆಯುತ್ತಿರುವ ವಿಷಯ ಸರ್ಕಾರದ

ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮಗಳೇನು ;

(ಇ) ಬೀದರ್ ಜಿಲ್ಲೆಯಲ್ಲಿ ಈವರೆಗೆ ಇಂತಹ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ ; ಬಂದಿದ್ದಲ್ಲಿ, ಪಡಿತರ ಅಂಗಡಿವಾರು ಸಂಪೂರ್ಣ ವಿವರ ನೀಡುವುದು ;

(ಈ) ಈ ರೀತಿಯಲ್ಲಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಅಂಗಡಿ ಮಾಲೀಕರು ಇಲಾಖಾ ಅಧಿಕಾರಿಗಳೊಂದಿಗೆ ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಫಲಾನುಭವಿಗಳಿಂದ ಪಡೆದ ಹಣವನ್ನು ಹಿಂತಿರುಗಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಊ) ನ್ಯಾಯಬೆಲೆ ಅಂಗಡಿಗಳಲ್ಲಿ ಕೊಳೆತ/ಯೋಗ್ಯವಲ್ಲದ ಆಹಾರ ಧಾನ್ಯಗಳನ್ನು ವಿತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದರಲ್ಲಿ ಭಾಗಿಯಾಗಿರುವವರ ವಿರುದ್ಧ ಯಾವ ಕ್ರಮಗಳನ್ನು ಈವರೆಗೆ ಕೈಗೊಳ್ಳಲಾಗಿದೆ ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದ ಪ್ರಮುಖ ಆಸ್ಪತ್ರೆಗಳಲ್ಲಿ O.T. Technicians ಹುದ್ದೆಗಳು ಖಾಲಿ ಇರುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೪೫೧ (೬೨೪) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಜಿಲ್ಲಾ, ತಾಲ್ಲೂಕು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ

ಎಷ್ಟು ಆಸ್ಪತ್ರೆಗಳಲ್ಲಿ “ಮೇಜರ್ ಆಪರೇಷನ್ ಥಿಯೇಟರ್ ಸೌಲಭ್ಯವಿದೆ ;

(ಆ) ಈ ರೀತಿಯ ಸೌಲಭ್ಯವಿರುವ ಆಸ್ಪತ್ರೆಗಳಲ್ಲಿ O.T. Technicians ಇರಬೇಕು ಎನ್ನುವ ನಿಯಮವಿದೆಯೇ ; ಹಾಗಿದ್ದಲ್ಲಿ, ಇದರ ಕಾರ್ಯವೇನು ; ಇವರುಗಳು ಇಲ್ಲದಿದ್ದಲ್ಲಿ, ಯಾವ ರೀತಿಯ ಸಮಸ್ಯೆ ಉಂಟಾಗುತ್ತದೆ ;

(ಇ) ಪ್ರಸ್ತುತ ಮಂಜೂರಾಗಿರುವ ಹುದ್ದೆಗಳು ಎಷ್ಟು ; ಖಾಲಿ ಇರುವ ಹುದ್ದೆಗಳು ಎಷ್ಟು ?

## ಬಿ.ಪಿ.ಎಲ್. ಕಾರ್ಡುದಾರರಿಗೆ ವಿತರಣೆಯಾಗದೆ ಉಳಿದಿರುವ ಪಡಿತರ ದಾಸ್ತಾನು ಯೋಗ್ಯವಾಗಿಲ್ಲದೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೪೫೨ (೭೨೭) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ಬಿ.ಪಿ.ಎಲ್. ಕಾರ್ಡುದಾರರಿಗೆ ನೀಡಲಾಗುವ ಪಡಿತರಗಳೇನು ; (ವಿವರ ನೀಡುವುದು)

(ಆ) ಫಲಾನುಭವಿಗಳಿಗೆ ವಿತರಿಸಲಾಗಿರುವ ಪಡಿತರದ ದಾಸ್ತಾನಿನ ಪ್ರಮಾಣ ಎಷ್ಟು ; (ವಿವರ ನೀಡುವುದು)

(ಇ) ಬಿ.ಪಿ.ಎಲ್. ಕಾರ್ಡುದಾರರಿಗೆ ವಿತರಣೆಯಾಗದೆ ಉಳಿದಿರುವ ಪಡಿತರದ ಪ್ರಮಾಣವೆಷ್ಟು ; ಅದರಲ್ಲಿ ಬಳಕೆಗೆ ಯೋಗ್ಯವಲ್ಲದ ಪಡಿತರದ ಪ್ರಮಾಣವೆಷ್ಟು ; (ವಿವರ ನೀಡುವುದು)

(ಈ) ವಿತರಣೆಯಾಗದೆ ಉಳಿಯಲು ಪ್ರಮುಖ ಕಾರಣಗಳೇನು ?

## ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ಮಿಸಬೇಕಾದ ಸಮುದಾಯ ಭವನಗಳ ನಿರ್ಮಾಣ ಕಾರ್ಯದಲ್ಲಿ ವಿಳಂಬವಾಗುತ್ತಿರುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೪೫೩ (೬೨೫) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿವಿಧ ಪ್ರವರ್ಗಗಳಿಗೆ ಸಂಬಂಧಿಸಿದಂತೆ ಎಷ್ಟು ರೀತಿಯ ಸಮುದಾಯ ಭವನಗಳನ್ನು ಸರ್ಕಾರದ ವತಿಯಿಂದ ನಿರ್ಮಿಸಿಕೊಡಲು ಅವಕಾಶವಿದೆ ; (ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಿಂದ ೨೦೧೬–೧೮ನೇ ಸಾಲಿನವರೆಗೆ ಎಷ್ಟು ಭವನಗಳನ್ನು ನಿರ್ಮಿಸುವ ಗುರಿ ಹೊಂದಲಾಗಿತ್ತು ; ಎಷ್ಟು ಭವನಗಳು ಪೂರ್ಣಗೊಂಡಿದೆ ;

(ಇ) ಎಷ್ಟು ಭವನಗಳು ಇದುವರೆವಿಗೂ ನಿರ್ಮಾಣಗೊಳ್ಳದೆ ಉಳಿದಿವೆ ; ಪ್ರಮುಖ ಕಾರಣಗಳೇನು ?

## ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಆಯುಕ್ತರ ಹುದ್ದೆಯಲ್ಲಿ ಪದೇ ಪದೇ ವರ್ಗಾವಣೆ ಆಗುತ್ತಿರುವ ಅನಾರೋಗ್ಯಕರ ಬೆಳವಣಿಗೆ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೪೫೪ (೬೨೬) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೫ನೇ ಜನವರಿಯಿಂದ ೨೦೧೮ನೇ ಜನವರಿಯವರೆಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಒಟ್ಟು

ಎಷ್ಟು ಆಯುಕ್ತರು ವರ್ಗಾವಣೆಗೊಂಡಿರುತ್ತಾರೆ ; (ವಿವರ ನೀಡುವುದು)

(ಆ) ಸದರಿ ಸಮಯದಲ್ಲಿ ಆಯುಕ್ತರ ಹುದ್ದೆಯಲ್ಲಿ ಒಟ್ಟು ೧೪ ಉನ್ನತ ಅಧಿಕಾರಿಗಳನ್ನು ವರ್ಗಾವಣೆ ಮಾಡಿರುವುದು ನಿಜವೇ ;

(ಇ) ನಿಜವಾಗಿದ್ದಲ್ಲಿ, ಇದಕ್ಕೆ ಪ್ರಮುಖ ಕಾರಣಗಳೇನು ;

(ಈ) ಸಾಮಾನ್ಯವಾಗಿ ವರ್ಗಾವಣೆ ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು ; ಈ ರೀತಿಯ ವರ್ಗಾವಣೆಗಳು ಅನಾವಶ್ಯಕವಲ್ಲವೇ ; ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು ? (ವಿವರ ನೀಡುವುದು)

## ಮಾಳಿ, ಮಾಲಗಾರ್, ಇತ್ಯಾದಿ ಜನಾಂಗದವರ ಬಗ್ಗೆ ನ್ಯಾಯಾಲಯದ ಆದೇಶ ಕುರಿತು

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):–**

೪೫೫ (೪೬೨) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಕರ್ನಾಟಕ ರಾಜ್ಯದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಬೀದರ್, ಕಲಬುರಗಿ, ಕೊಪ್ಪಳ ಹುಬ್ಬಳ್ಳಿ–ಧಾರವಾಡ, ಗದಗ, ಹಾವೇರಿ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ವಾಸವಾಗಿರುವ ಹೂವಾಡಿಗ, ಮಾಳಿ, ಮಾಲಗಾರ್, ಹುಗಾರ್, ಹೂಗಾರ್, ತೋಟಿಗಾರ್, ಫುಲ್ಮಾಲಿ, ಪೂಲವಾಲಿ, ಫುಲಾರಿ, ಫೂಲಾರಿ, ಕ್ಷತ್ರಿಯಮಾಳಿ, ಜೀರ್ ಸಮಾಜ ಬಹಳ ಹಿಂದೆಯೇ ಹಿಂದು ಲಿಂಗಾಯತ್ ಪಂಗಡದ ಜೊತೆಗೆ ಗುರುತಿಸಿಕೊಂಡಿದ್ದ ಹಲವು ಮಂದಿ, ಕೆಲವು ಪ್ರಕರಣಗಳಲ್ಲಿ ಹಿಂದೂ ಲಿಂಗಾಯತ್‌ನಿಂದ ಬೇರ್ಪಡಿಸಿ, ೨ಎಗೆ ಸೇರ್ಪಡೆ ಮಾಡುವ ನ್ಯಾಯಾಲಯದ ಆದೇಶ ಸರ್ಕಾರದ

ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು ?

## ತಿಗಳ ಜನಾಂಗದವರಿಗೆ ನೀಡಿರುವ ಅನುಕೂಲ ಹಾಗೂ ಫಲಾನುಭವಿಗಳ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):–**

೪೫೬ (೬೩) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸವಾಗಿರುವ ವರ್ಗ ೨ಎಗೆ ಸೇರಿದ ತಿಗಳ ಜನಾಂಗದವರಿಗೆ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ೨೦೧೩ರಿಂದ ಇಲ್ಲಿಯವರೆವಿಗೂ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳಿಂದ ಅನುಕೂಲ ಪಡೆದ ಫಲಾನುಭವಿಗಳ ಮಾಹಿತಿಯನ್ನು ವರ್ಷಾವಾರು ಹಾಗೂ ಜಿಲ್ಲಾವಾರು ನೀಡುವುದು ;

(ಆ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸವಾಗಿರುವ ವರ್ಗ ೨ಎಗೆ ಸೇರಿದ ತಿಗಳ ಜನಾಂಗದವರಿಗೆ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ೨೦೧೩ರಿಂದ ಇಲ್ಲಿಯವರೆವಿಗೂ ಶಿಕ್ಷಣ ಹಾಗೂ ಉದ್ಯೋಗ ಅವಕಾಶಗಳನ್ನು ಕಲ್ಪಿಸಿರುವ ಬಗ್ಗೆ ಮಾಹಿತಿಯನ್ನು ವರ್ಷಾವಾರು ಹಾಗೂ ಜಿಲ್ಲಾವಾರು ನೀಡುವುದು ;

(ಇ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸವಾಗಿರುವ ವರ್ಗ ೨ಎಗೆ ತಿಗಳ ಜನಾಂಗಕ್ಕೆ ಸೇರಿದ ಸಂಘ–ಸಂಸ್ಥೆಗಳಿಗೆ

೨೦೧೩ರಿಂದ ಇಲ್ಲಿಯವರೆವಿಗೂ ಶೈಕ್ಷಣಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಸರ್ಕಾರದಿಂದ ಮಂಜೂರಾತಿ ಹಾಗೂ ಬಿಡುಗಡೆಯಾಗಿರುವ ಸಂಪೂರ್ಣ ಮಾಹಿತಿಯನ್ನು ವರ್ಷಾವಾರು ಹಾಗೂ ಜಿಲ್ಲಾವಾರು ನೀಡುವುದು ?

## ಬೆಂಗಳೂರು ನಗರದ ಸರ್ಕಾರಿ ಆಸ್ಪತ್ರೆಯಲ್ಲಿರುವ ಯುನಾನಿ ಕೇಂದ್ರ ಹಾಗೂ ವೈದ್ಯರ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):–**

೪೫೭ (೬೬೨) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಾದ್ಯಂತ ಬೆಂಗಳೂರು ನಗರದಲ್ಲಿರುವ ರೆಫರಲ್ ಆಸ್ಪತ್ರೆಗಳು ಸೇರಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಆಯುರ್ವೇದ ಆಸ್ಪತ್ರೆಗಳಲ್ಲಿ ಎಷ್ಟು ಯುನಾನಿ ಚಿಕಿತ್ಸಾ ಕೇಂದ್ರಗಳಿವೆ ; ಸಂಪೂರ್ಣವಾದ ಮಾಹಿತಿಯನ್ನು ದಾಖಲಾತಿಗಳೊಂದಿಗೆ ನೀಡುವುದು ;

(ಆ) ಈ ಕೇಂದ್ರಗಳಲ್ಲಿ BUMS ಪದವಿ ಪಡೆದ ಎಷ್ಟು ಯುನಾನಿ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ ; ಸಂಪೂರ್ಣವಾದ ದಾಖಲಾತಿಗಳೊಂದಿಗೆ ಮಾಹಿತಿಯನ್ನು ನೀಡುವುದು ;

(ಇ) ಸ್ವಯಂಸೇವೆಗೆ ಕಳೆದ ೮ ವರ್ಷಗಳಿಂದ ಯುನಾನಿ ಪದವಿ ಪಡೆದ ಸಾಮಾನ್ಯ ವೈದ್ಯರ (General Physicians) ಹುದ್ದೆಗೆ ಎಷ್ಟು ವೈದ್ಯರನ್ನು ನೇಮಕಾತಿ ಮಾಡಲಾಗಿದೆ ; ಸಂಪೂರ್ಣವಾದ ದಾಖಲಾತಿಗಳೊಂದಿಗೆ ಮಾಹಿತಿಯನ್ನು ನೀಡುವುದು ;

(ಈ) ರಾಜ್ಯದಾದ್ಯಂತ ಬೆಂಗಳೂರು ನಗರದಲ್ಲಿರುವ ರೆಫರಲ್ ಆಸ್ಪತ್ರೆಗಳು ಸೇರಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಆಯುರ್ವೇದ ಆಸ್ಪತ್ರೆಗಳಲ್ಲಿ

ಖಾಲಿ ಇರುವ ಯುನಾನಿ ವೈದ್ಯ ಹುದ್ದೆಗಳ ಸಂಖ್ಯೆ ಎಷ್ಟು ; ಸಂಪೂರ್ಣವಾದ ದಾಖಲಾತಿಗಳೊಂದಿಗೆ ಮಾಹಿತಿಯನ್ನು ನೀಡುವುದು ?

## ವರ್ಗ ೨ಎಗೆ ಸೇರಿದ ಹಲವಾರು ಜನಾಂಗಗಳಿಗೆ ದೇವರಾಜ ಅರಸು ಹಿಂದುಳಿದ ವರ್ಗ ಅಭಿವೃದ್ಧಿ ನಿಗಮದಿಂದ ನೀಡಿರುವ ಅನುಕೂಲಗಳ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):–**

೪೫೮ (೬೯೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸವಾಗಿರುವ ವರ್ಗ ೨ಎಗೆ ಸೇರಿದ ಹೂವಾಡಿಗ, ಮಾಳಿ, ಮಾಲಗಾರ್, ಹುಗಾರ್, ಹೂಗಾರ್, ತೋಟಿಗಾರ್, ಪುಲ್‌ಮಾಲಿ, ಪೂಲಮಾಲಿ, ಫುಲಾರಿ, ಫೂಲಾರಿ, ಕ್ಷತ್ರಿಯಮಾಳಿ, ಜೀರ್ ಈ ಎಲ್ಲಾ ಜಾತಿಗಳಿಗೆ ಸೇರಿದ ಜನರಿಗೆ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ೨೦೧೩ರಿಂದ ಇಲ್ಲಿಯವರೆವಿಗೂ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳಿಂದ ಅನುಕೂಲ ಪಡೆದ ಫಲಾನುಭವಿಗಳ ಮಾಹಿತಿಯನ್ನು ವರ್ಷವಾರು, ಜಿಲ್ಲಾವಾರು ನೀಡುವುದು ;

(ಆ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸವಾಗಿರುವ ವರ್ಗ ೨ಎಗೆ ಸೇರಿದ ಹೂವಾಡಿಗ, ಮಾಳಿ, ಮಾಲಗಾರ್, ಹುಗಾರ್, ಹೂಗಾರ್, ತೋಟಿಗಾರ್, ಪುಲ್‌ಮಾಲಿ, ಪೂಲಮಲಿ, ಫುಲಾರಿ, ಫೂಲಾರಿ, ಕ್ಷತ್ರಿಯಮಾಳಿ, ಜೀರ್ ಈ ಎಲ್ಲಾ ಜಾತಿಗಳಿಗೆ ಸೇರಿದ ಜನರಿಗೆ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ೨೦೧೩ರಿಂದ ಇಲ್ಲಿಯವರೆವಿಗೂ ಶಿಕ್ಷಣ ಹಾಗೂ

ಉದ್ಯೋಗ ಅವಕಾಶಗಳನ್ನು ಕಲ್ಪಿಸಿರುವ ಬಗ್ಗೆ ಹಾಗೂ ಈ ಎಲ್ಲಾ ಸಮಾಜಗಳಿಗೆ ಸೇರಿದ ಸಂಘ–ಸಂಸ್ಥೆಗಳಿಗೆ ೨೦೧೩ರಿಂದ ಇಲ್ಲಿಯವರೆವಿಗೂ ಶೈಕ್ಷಣಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಸರ್ಕಾರದಿಂದ ಮಂಜೂರಾತಿ ಹಾಗೂ ಬಿಡುಗಡೆಯಾಗಿರುವ ಅನುದಾನದ ಸಂಪೂರ್ಣ ಮಾಹಿತಿಯನ್ನು ವರ್ಷಾವಾರು, ಜಿಲ್ಲಾವಾರು ನೀಡುವುದು ?

## ಇಂದಿರಾ ಸುರಕ್ಷಾ ಯೋಜನೆ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–**

೪೫೯ (೪೪೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕದಲ್ಲಿ ಇಂದಿರಾ ಸುರಕ್ಷಾ ಯೋಜನೆಯನ್ನು ಎಂದಿನಿಂದ ಜಾರಿಗೊಳಿಸಲಾಗಿದೆ ; ಸದರಿ ಯೋಜನೆಯಲ್ಲಿ ಆತ್ಮಹತ್ಯೆಗೆ ಒಳಗಾದ ಎಷ್ಟು ರೈತರ ಕುಟುಂಬಗಳಿಗೆ ಸಮಗ್ರ ಆರೋಗ್ಯ ಸೇವೆಯನ್ನು ನೀಡಲಾಗಿದೆ ; (ಫಲಾನುಭವಿಗಳ ವಿವರಗಳನ್ನು ನೀಡುವುದು)

(ಆ) ಆರೋಗ್ಯ ಇಲಾಖೆಯಲ್ಲಿ ಆರೈಕೆ ಯೋಜನೆ ಅಡಿಯಲ್ಲಿ ಇಲ್ಲಿಯವರೆಗೆ ಎಷ್ಟು ತಂಗುದಾಣಗಳನ್ನು ನಿರ್ಮಿಸಲಾಗಿದೆ ; ಪ್ರಗತಿಯಲ್ಲಿರುವ ಕಾಮಗಾರಿಗಳೆಷ್ಟು ;

(ಇ) ಆಪದ್ಬಾಂಧವ ಯೋಜನೆಯಡಿಯಲ್ಲಿ ರಾಜ್ಯದ ಐದು ಸ್ಥಳಗಳಲ್ಲಿ ತುರ್ತು ಚಿಕಿತ್ಸಾ ಕೇಂದ್ರಗಳನ್ನು ತೆರೆಯುವ ಆಯವ್ಯಯದ ಘೋಷಣೆಯನ್ನು ಜಾರಿಗೊಳಿಸಲಾಗಿದೆಯೇ ; ಇಲ್ಲದೇ ಇದ್ದಲ್ಲಿ, ಯಾವಾಗ ಜಾರಿಗೊಳಿಸಲಾಗುವುದು ;

(ಈ) ಎಷ್ಟು ಜಿಲ್ಲಾ ಕೇಂದ್ರಗಳಲ್ಲಿ ಓರಲ್ ಕ್ಯಾನ್ಸರ್ ಪತ್ತೆ ಹಚ್ಚಲು ತಪಾಸಣಾ ಕೇಂದ್ರಗಳನ್ನು ತೆರೆಯಲಾಗಿದೆ ;

(ಉ) ರಾಜ್ಯದಲ್ಲಿ ಎಷ್ಟು ಜಿಲ್ಲಾ ಇಂಟಿಗ್ರೇಟೆಡ್ ಆಸ್ಪತ್ರೆಗಳನ್ನು ತೆರೆಯಲಾಗಿದೆ ; ಯಾವ ಯಾವ ಜಿಲ್ಲೆಗಳಲ್ಲಿ ಆಯುಷ್ ಇಂಟಿಗ್ರೇಟೆಡ್ ಆಸ್ಪತ್ರೆಗಳನ್ನು ತೆರೆಯಬೇಕಾಗಿದೆ ; ಆಯುಷ್ ಇಲಾಖೆಯಲ್ಲಿ ಖಾಲಿಯಿರುವ ವೈದ್ಯರ ಸಂಖ್ಯೆ ಎಷ್ಟು ; ಇದನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಕನ್ನಡ ಸಂಘ–ಸಂಸ್ಥೆಗಳ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–**

೪೬೦ (೪೪೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಮತ್ತು ಹಿರಿಯ ನಾಗರಿಕ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ೦೧.೦೫.೨೦೧೩ ರಿಂದ ಇಲ್ಲಿಯವರೆಗೆ ಎಷ್ಟು ಜನ ಎಂ.ಫಿಲ್., ಮತ್ತು ಪಿ.ಹೆಚ್‌ಡಿ ವ್ಯಾಸಂಗ ಮಾಡಿದವರಿಗೆ/ಮಾಡುತ್ತಿರುವವರಿಗೆ ಶಿಷ್ಯ ವೇತನ ನೀಡಲಾಗಿದೆ ; ಇವರಿಗೆ ನೀಡುತ್ತಿರುವ ಶಿಷ್ಯ ವೇತನದ ಮೊತ್ತವೆಷ್ಟು ; ವಾರ್ಷಿಕ ಎಷ್ಟು ಜನರಿಗೆ ಶಿಷ್ಯ ವೇತನ ನೀಡಲಾಗುತ್ತದೆ ; ಪ್ರಸಕ್ತ ಸಾಲಿನಲ್ಲಿ ಶಿಷ್ಯ ವೇತನ ಕೋರಿ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿದ್ದವು ;

(ಆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ೦೧.೦೫.೨೦೧೩ ರಿಂದ ಇಲ್ಲಿಯವರೆಗೆ ಎಷ್ಟು ಸಂಘ–ಸಂಸ್ಥೆಗಳಿಗೆ ಪ್ರೋತ್ಸಾಹ ಧನ ನೀಡಲಾಗಿದೆ ; ಪ್ರತಿ ಸಂಘ–ಸಂಸ್ಥೆಗಳಿಗೆ ನೀಡುವ ಕನಿಷ್ಠ ಮತ್ತು ಗರಿಷ್ಠ ಪ್ರೋತ್ಸಾಹದ ಧನ ಎಷ್ಟು ; ಪ್ರೋತ್ಸಾಹಧನ ನೀಡಲು

ಇರುವ ಮಾನದಂಡಗಳೇನು ; ಪ್ರಸಕ್ತ ಸಾಲಿನಲ್ಲಿ ಎಷ್ಟು ಸಂಘ–ಸಂಸ್ಥೆಗಳ ಪ್ರೋತ್ಸಾಹ ಧನ ಪ್ರಸ್ತಾಪನೆಗಳನ್ನು ಯಾವ ಯಾವ ಕಾರಣಕ್ಕೆ ಅಂಗೀಕರಿಸಲಾಗಿದೆ ಮತ್ತು ತಿರಸ್ಕರಿಸಲಾಗಿದೆ ; (ಜಿಲ್ಲಾವಾರು ಪೂರ್ಣ ವಿವರಗಳನ್ನು ನೀಡುವುದು)

(ಇ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಎಷ್ಟು ಸಂಸ್ಕೃತಿ ಭವನಗಳನ್ನು ನಿರ್ವಹಣೆ ಮಾಡಲಾಗುತ್ತಿದೆ ; ಇವುಗಳ ಬಾಡಿಗೆ ದರ ಎಷ್ಟು ; ವಾರ್ಷಿಕವಾಗಿ ಸಾಂಸ್ಕೃತಿಕ ಭವನಗಳಿಂದ ಆದಾಯ ಬರುತ್ತಿದೆ ; ವಾರ್ಷಿಕ ನಿರ್ವಹಣೆಗೆ ಖರ್ಚಾಗುತ್ತಿರುವ ಹಣವೆಷ್ಟು ; ಬೆಂಗಳೂರಿನಲ್ಲಿರುವ ಸಾಂಸ್ಕೃತಿಕ ಭವನಗಳೆಷ್ಟು ; ಇವುಗಳಿಗೆ ನಿಗದಿಪಡಿಸಿರುವ ಬಾಡಿಗೆ ದರ ಎಷ್ಟು ; ಬಾಡಿಗೆ ನೀಡಲು ನಿಗದಿಪಡಿಸಿರುವ ಮಾನದಂಡಗಳೇನು ?

## ಗ್ರಾಹಕರ ಹಕ್ಕು ಸಂರಕ್ಷಣೆ ಕುರಿತು

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–**

೪೬೧ (೪೪೭) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾನೂನು ಮಾಪಕ (Legal Metrology) ಇಲಾಖೆ ರಾಜ್ಯದಲ್ಲಿರುವ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ನೀಡುವ ತಿಂಡಿ ತಿನಿಸುಗಳ ಮೇಲೆ ದರ ಪಟ್ಟಿಯನ್ನು ನಿಗದಿಪಡಿಸಿರುತ್ತದೆಯೇ ; ಇಲ್ಲದೇ ಇದ್ದಲ್ಲಿ, ಇದಕ್ಕೆ ಕಾರಣವೇನು ; ಗುಣಮಟ್ಟ, ಮೌಲ್ಯಮಾಪನಕ್ಕೆ ಯಾವ ಮಾನದಂಡ ಅನುಸರಿಸಲಾಗುತ್ತಿದೆ ;

(ಆ) ಕಾನೂನು ಮಾಪಕ (Legal Metrology) ಇಲಾಖೆಯು ಜಾಹೀರಾತುಗಳನ್ನು ನೀಡಿ ಗ್ರಾಹಕರನ್ನು ವಂಚಿಸುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ರಾಜ್ಯದಲ್ಲಿ ಸುಳ್ಳು ಜಾಹೀರಾತುಗಳನ್ನು ನೀಡಿ ಗ್ರಾಹಕರನ್ನು ವಂಚಿಸಿರುವ ಎಷ್ಟು ಸಂಸ್ಥೆಗಳ ಮೇಲೆ ಕಳೆದ ನಾಲ್ಕು ವರ್ಷಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ ; ಸುಳ್ಳು ಜಾಹೀರಾತುಗಳ ಮೇಲೆ ದೂರು ನೀಡಲು ಗ್ರಾಹಕರಿಗೆ ಯಾವ ಅವಕಾಶಗಳನ್ನು ಒದಗಿಸಲಾಗಿದೆ ;

(ಇ) ಕಾನೂನು ಮಾಪಕ (Legal Metrology) ಇಲಾಖೆಯು ಯಾವ ಯಾವ ವಾಣಿಜ್ಯ ಸಂಸ್ಥೆಗಳಿಗೆ ಅನುಮತಿ ಪತ್ರ ಶುಲ್ಕಗಳನ್ನು ನಿಗದಿಪಡಿಸಿರುತ್ತದೆ ; ವಾರ್ಷಿಕ ಸಂಗ್ರಹವಾಗುತ್ತಿರುವ ಅನುಮತಿ ಶುಲ್ಕ ಎಷ್ಟು ;

(ಈ) ಗ್ರಾಹಕರಲ್ಲಿ ಜಾಗೃತಿ ಉಂಟು ಮಾಡಲು ಮತ್ತು ಗ್ರಾಹಕರ ಹಿತಾಸಕ್ತಿಯನ್ನು ಸಂರಕ್ಷಿಸಲು ಇಲಾಖೆಯು ಯಾವ ಯಾವ ಕ್ರಮಗಳನ್ನು ಕೈಗೊಂಡಿರುತ್ತದೆ ; ಸುಳ್ಳು ಜಾಹೀರಾತುಗಳ ಮೂಲಕ ಮೋಸ ಹೋದ ಗ್ರಾಹಕರು ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ದೂರುಗಳನ್ನು ದಾಖಲಿಸಿದ್ದಾರೆ ; ಇವುಗಳ ಮೇಲೆ ಕೈಗೊಂಡ ಕ್ರಮಗಳೇನು ?

## ಅಂಗನವಾಡಿ ಕೇಂದ್ರಗಳ ಮಾಹಿತಿ ಕೋರಿ

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–**

೪೬೨ (೪೪೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾತೃ ಪುಷ್ಠಿವರ್ದಿನಿ ಯೋಜನೆಯನ್ನು ಕರ್ನಾಟಕದಲ್ಲಿ ಎಂದಿನಿಂದ ಜಾರಿಗೊಳಿಸಲಾಗಿದೆ ; ಈ ಯೋಜನೆಗೆ ಇಲ್ಲಿಯವರೆಗೆ

ಎಷ್ಟು ಹಣ ಒದಗಿಸಲಾಗಿದೆ ; ಈ ಯೋಜನೆ ಬಂದ ನಂತರ ಎಷ್ಟು ಫಲಾನುಭವಿಗಳು ಇದರ ಲಾಭ ಪಡೆದಿರುತ್ತಾರೆ ; (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)

(ಆ) ಕರ್ನಾಟಕದಲ್ಲಿ ಇರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು ; ಇವುಗಳಲ್ಲಿ ಎಷ್ಟು ಕೇಂದ್ರಗಳು ಸ್ವಂತ ಮತ್ತು ಬಾಡಿಗೆ ಆಧಾರದಲ್ಲಿ ಇರುತ್ತದೆ ; ೦೧.೦೫.೨೦೧೩ ರಿಂದ ಇಲ್ಲಿಯವರೆಗೆ SCSP/TSP ಯೋಜನೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಎಷ್ಟು ಅನುದಾನವನ್ನು ನೀಡಲಾಗಿದೆ ಮತ್ತು ಇದರಲ್ಲಿ ಎಷ್ಟು ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗಿದೆ ;

(ಇ) ರಾಜ್ಯದಲ್ಲಿ ಎಂದಿನಿಂದ ಮಹಿಳಾ ಸಬಲೀಕರಣ ಕಾರ್ಯನೀತಿಯನ್ನು ಜಾರಿಗೆ ತರಲಾಗಿದೆ ; ಇಲ್ಲಿಯವರೆಗೆ ಈ ಯೋಜನೆಗೆ ಎಷ್ಟು ಹಣವನ್ನು ಒದಗಿಸಲಾಗಿದೆ ; ಈ ಯೋಜನೆಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಹಮ್ಮಿಕೊಂಡಿರುತ್ತದೆ ;

(ಈ) ರಾಜ್ಯದಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯನ್ನು ರಚಿಸಲಾಗಿದೆಯೇ ; ಇಲ್ಲದೇ ಇದ್ದಲ್ಲಿ, ಕಾರಣಗಳೇನು ; ಎಷ್ಟು ಜಿಲ್ಲೆಗಳಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯನ್ನು ರಚಿಸಲಾಗಿದೆ; ಇನ್ನೂ ಎಷ್ಟು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಬೇಕಾಗಿರುತ್ತದೆ ; ಈ ಸಮಿತಿಗಳಿಗೆ ಸರ್ಕಾರ ವಾರ್ಷಿಕ ವೆಚ್ಚದ ಅನುದಾನವೆಷ್ಟು ಮತ್ತು ಅಧ್ಯಕ್ಷರು ಹಾಗೂ ಎಷ್ಟು ಗೌರವ ಭತ್ಯೆ ನೀಡುತ್ತಿದೆ ?

## ಆಶ್ರಮ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಖಾಯಂಗೊಳಿಸುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೬೩ (೪೫೩) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸವಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಆಶ್ರಮ ಶಾಲೆಗಳಲ್ಲಿ ಹಲವು ವರ್ಷಗಳಿಂದ ಅತಿಥಿ/ಗೌರವ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳೆಷ್ಟು ; (ಮಾಹಿತಿ ನೀಡುವುದು)

(ಆ) ಸರ್ಕಾರಿ ಆಶ್ರಮ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ/ಗೌರವ ಶಿಕ್ಷಕರಲ್ಲಿ ಎಷ್ಟು ಶಿಕ್ಷಕರನ್ನು ಖಾಯಂಗೊಳಿಸಲಾಗಿದೆ ;

(ಇ) ಖಾಯಂಗೊಳಿಸಲು ಬಾಕಿಯಿರುವ ಶಿಕ್ಷಕರೆಷ್ಟು ; ಇವರನ್ನು ಖಾಯಂಗೊಳಿಸಲು ಸರ್ಕಾರದ ನಿಲುವೇನು ?

## ಮಡಿಕೇರಿ ತಾಲ್ಲೂಕು ನಾಲ್ಕುನಾಡು ಅರಮನೆಯ ದುಸ್ಥಿತಿ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೬೪ (೪೫೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿರುವ ಮಡಿಕೇರಿ ತಾಲ್ಲೂಕಿನ ನಾಲ್ಕುನಾಡು ಅರಮನೆ ಪ್ರಸ್ತುತ ರಾಜ್ಯ ಸರ್ಕಾರದ ಸುಪರ್ದಿಯಲ್ಲಿದೆಯೇ ;

(ಆ) ಇದ್ದಲ್ಲಿ, ಸದರಿ ನಾಲ್ಕುನಾಡು ಅರಮನೆಯನ್ನು ಸುಸ್ಥಿತಿಯಲ್ಲಿ ಕಾಪಾಡಲು ಯಾವ ಕ್ರಮ ವಹಿಸಲಾಗಿದೆ ;

(ಇ) ಪ್ರಸ್ತುತ ಸಾಲಿನಲ್ಲಿ ನಿರ್ವಹಣೆಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು ; (ಮಾಹಿತಿ ನೀಡುವುದು)

(ಈ) ಒಂದು ವೇಳೆ ರಾಜ್ಯ ಸರ್ಕಾರದ ಸುಪರ್ದಿಯಲ್ಲಿಲ್ಲದಿದ್ದಲ್ಲಿ, ಕೇಂದ್ರ ಸರ್ಕಾರಕ್ಕೆ ನಿರ್ವಹಣೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ? (ಮಾಹಿತಿ ನೀಡುವುದು)

## ವಿಕಲಚೇತನ ಮಕ್ಕಳಿಗೆ ನೀಡಲಾಗುವ ಸೌಲಭ್ಯಗಳ ಕೊರತೆ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೬೫ (೪೫೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೭–೧೮ನೇ ಸಾಲಿನಲ್ಲಿ ರಾಜ್ಯದಲ್ಲಿ ಅಂಗವಿಕಲ/ವಿಕಲಚೇತನ ಹೊಂದಿರುವ ಮಕ್ಕಳನ್ನು ಗುರ್ತಿಸಲಾಗಿದೆಯೇ ; ಎಷ್ಟು ಮಕ್ಕಳನ್ನು ಗುರುತಿಸಲಾಗಿದೆ ; (ಮಾಹಿತಿ ನೀಡುವುದು)

(ಆ) ಅಂಗವಿಕಲ/ವಿಕಲಚೇತನ ಹೊಂದಿರುವ ಮಕ್ಕಳನ್ನು ಮುಖ್ಯ ವಾಹಿನಿಗೆ ತಂದು ಶಿಕ್ಷಣ ನೀಡಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ ;

(ಇ) ಅಂತಹ ಮಕ್ಕಳನ್ನು ಶಾಲೆಗೆ ದಾಖಲು ಮಾಡಿದ್ದಲ್ಲಿ, ಅವರುಗಳಿಗೆ ಪ್ರಸ್ತುತ ನೀಡಲಾಗುತ್ತಿರುವ ಸೌಲಭ್ಯಗಳೇನು ;

(ಈ) ಈ ವಿಚಾರವಾಗಿ ಪ್ರಸ್ತುತ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿದ್ದಲ್ಲಿ, ತಾಲ್ಲುಕುವಾರು ಮಾಹಿತಿ ನೀಡುವುದು ;

(ಉ) ಅಂಗವಿಕಲ/ವಿಕಲಚೇತನ ಹೊಂದಿರುವ ಮಕ್ಕಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಸೌಲಭ್ಯಗಳು ಯಾವುವು ; ಇವುಗಳನ್ನು ಮಕ್ಕಳಿಗೆ ತಲುಪಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು ?

## ವಿಶೇಷ ಪ್ಯಾಕೇಜ್‌ನಲ್ಲಿ ಬಿಡುಗಡೆಯಾದ ಅನುದಾನದ ಕಾಮಗಾರಿ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೬೬ (೪೫೫) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ೨೦೧೭–೧೮ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ರಸ್ತೆಗಳ ನಿರ್ವಹಣೆಗಾಗಿ ವಿಶೇಷ ಪ್ಯಾಕೇಜ್‌ನ್ನು ಮಂಜೂರು ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಮಂಜೂರು ಮಾಡಲಾದ ಮೊತ್ತವೆಷ್ಟು ;

(ಆ) ವಿಶೇಷ ಪ್ಯಾಕೇಜ್‌ನಲ್ಲಿ ಬಿಡುಗಡೆಯಾದ ಅನುದಾನಕ್ಕೆ ನಡೆಯುತ್ತಿರುವ ಕಾಮಗಾರಿಗಳು ಯಾವುವು ; ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ ; (ವಿವರ ನೀಡುವುದು)

(ಇ) ಸದರಿ ವಿಶೇಷ ಪ್ಯಾಕೇಜ್ ಕಾಮಗಾರಿಯನ್ನು ಯಾವ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು ?

## ಆಶ್ರಮ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೬೭ (೪೫೬) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಆಶ್ರಮ ಶಾಲೆಗಳೆಷ್ಟು ; ಅವುಗಳಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಯುತ್ತಿರುವ ಆಶ್ರಮ ಶಾಲೆಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಶಿಕ್ಷಕರ ಶಿಕ್ಷಣ ಇಲಾಖೆಯಿಂದ ನಿಯೋಜನೆ / ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು ;

(ಇ) ಕಳೆದ ೩ ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಆಶ್ರಮ ಶಾಲೆಗಳಿಗೆ ಶಿಕ್ಷಕರ ನೇಮಕಾತಿ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಎಷ್ಟು ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ ; (ಮಾಹಿತಿ ನೀಡುವುದು)

(ಈ) ಸಮಾಜ ಕಲ್ಯಾಣ ಇಲಾಖೆಯಿಂದಲೇ ಸರ್ಕಾರಿ ಆಶ್ರಮ ಶಾಲೆಗಳಿಗೆ ಶಿಕ್ಷಕರ ನೇಮಕಾತಿ ಮಾಡಿದ್ದಲ್ಲಿ, ಶಿಕ್ಷಣ ಇಲಾಖೆಯಿಂದ ನಿಯೋಜನೆ / ನೇಮಕಾತಿ ಹೊಂದಿ ಆಶ್ರಮ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಶಿಕ್ಷಣ ಇಲಾಖೆಗೆ ಹಿಂದಿರುಗಿಸಲು ಇರುವ ತೊಡಕುಗಳೇನು ; ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ? (ಮಾಹಿತಿ ನೀಡುವುದು)

## ಹಾವೇರಿ ಜಿಲ್ಲೆಯಲ್ಲಿರುವ ವಸತಿ ನಿಲಯಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೪೬೮ (೬೮೭) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರದ ವಸತಿ ನಿಲಯಗಳೆಷ್ಟು ; ಇವುಗಳಲ್ಲಿ ವಿದ್ಯಾರ್ಥಿ / ವಿದ್ಯಾರ್ಥಿನಿಯರ ವಸತಿ ನಿಲಯಗಳೆಷ್ಟು ; ಪ್ರತಿಯೊಂದು ವಸತಿ ಶಾಲೆಯಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ವಸತಿ ನಿಲಯಗಳ ಸಮೇತ ತಾಲ್ಲೂಕುವಾರು ವಿವರ ನೀಡುವುದು)

(ಆ) ಹಾವೇರಿ ಜಿಲ್ಲೆಯಲ್ಲಿ ಸರ್ಕಾರದ ಅನುದಾನದಲ್ಲಿ ನಡೆಯುವ ಖಾಸಗಿ ವಸತಿ ನಿಲಯಗಳೆಷ್ಟು; ಇದರಲ್ಲಿ ವಿದ್ಯಾರ್ಥಿ / ವಿದ್ಯಾರ್ಥಿನಿಯರ ವಸತಿ ನಿಲಯಗಳೆಷ್ಟು; ಪ್ರತಿಯೊಂದು ವಸತಿ ಶಾಲೆಯಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಸತಿ ನಿಲಯಗಳ ಸಮೇತ ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ವಸತಿ ನಿಲಯಗಳಿಗೆ ಪ್ರತಿ ವರ್ಷಕ್ಕೆ ಎಷ್ಟು ಅನುದಾನ ಮಂಜೂರು ಮಾಡಲಾಗುತ್ತಿದೆ; ಈ ಅನುದಾನ ಪಡೆಯಲು ಇರುವ ಮಾನದಂಡಗಳೇನು; (ವಸತಿ ನಿಲಯಗಳ ಸಮೇತ ತಾಲ್ಲೂಕುವಾರು ವಿವರ ನೀಡುವುದು)

(ಈ) ೨೦೧೩-೧೪ನೇ ಸಾಲಿನಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿರುವ ಸರ್ಕಾರಿ ವಸತಿ ನಿಲಯಕ್ಕೆ ಪ್ರತಿವರ್ಷ ಕಟ್ಟಡಕ್ಕಾಗಿ, ದುರಸ್ಥಿಗಾಗಿ ಮತ್ತು ಇನ್ನಿತರ ಕೆಲಸ ಕಾರ್ಯಗಳಿಗೆ ಸರ್ಕಾರದಿಂದ ಮಂಜೂರಾದ ಅನುದಾನ ಎಷ್ಟು; ಈ ಅನುದಾನ ಪೂರ್ತಿ ಖರ್ಚಾಗಿದೆಯೇ; ಅಥವಾ ಬಾಕಿ ಉಳಿದಿದೆಯೇ ? (ವರ್ಷವಾರು, ಯೋಜನೆವಾರು, ಕೆಲಸವಾರು, ವಸತಿ ನಿಲಯದ ಬಗ್ಗೆ ತಾಲ್ಲೂಕುವಾರು ಮಾಹಿತಿ ನೀಡುವುದು)

## ಹಾವೇರಿ ಜಿಲ್ಲೆಯಲ್ಲಿರುವ ಅಂಗನವಾಡಿಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೪೬೯ (೭೦೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಪೈಕಿ ಸ್ವಂತ ಕಟ್ಟಡ ಮತ್ತು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು;

(ಇ) ೨೦೧೪ ರಿಂದ ಇಲ್ಲಿಯವರೆಗೆ ನಿರ್ಮಿಸಿರುವ ಹೊಸ ಅಂಗನವಾಡಿ ಕಟ್ಟಡಗಳ ಸಂಖ್ಯೆ ಎಷ್ಟು; ಇದಕ್ಕಾಗಿ ಮಂಜೂರು ಮಾಡಿರುವ ಮತ್ತು ಬಿಡುಗಡೆ ಮಾಡಿರುವ ಅನುದಾನ ಎಷ್ಟು? (ಗ್ರಾಮವಾರು, ತಾಲ್ಲೂಕುವಾರು, ವರ್ಷವಾರು, ವಿವರ ನೀಡುವುದು)

## ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಯೋಜನೆಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೪೭೦ (೭೦೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಯಾವ ಯಾವ ಯೋಜನೆಗಳು ಇರುತ್ತವೆ; ಈ ಯೋಜನೆಗಳ ಅಡಿಯಲ್ಲಿ ೨೦೧೩–೧೪ ರಿಂದ ಇಲ್ಲಿಯವರೆಗೆ ಹಾವೇರಿ ಜಿಲ್ಲೆಗೆ ಸರ್ಕಾರದಿಂದ ಬಂದ ಅನುದಾನ ಎಷ್ಟು; (ವರ್ಷಾವಾರು, ಯೋಜನೆವಾರು, ಕಾಮಗಾರಿವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಇಲಾಖೆಯ ಯಾವ ಯಾವ ಯೋಜನೆಯಡಿಯಲ್ಲಿ ಶಿಗ್ಗಾಂವ ಸವಣೂರು ಮತಕ್ಷೇತ್ರದ ಎಷ್ಟು ಫಲಾನುಭವಿಗಳು ಇದರ ಸದುಪಯೋಗವನ್ನು ಪಡೆದಿದ್ದಾರೆಯೇ? (ಫಲಾನುಭವಿಗಳ ಹೆಸರು, ಯೋಜನೆಗಳ ಸಮೇತ ವರ್ಷವಾರು ಸಂಪೂರ್ಣ ವಿವರ ನೀಡುವುದು)

## ೨೦೧೩-೧೪ ರಿಂದ ಹಾವೇರಿ ಜಿಲ್ಲೆಗೆ ಬಂದ ಅನುದಾನದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೪೭೧ (೭೦೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩-೧೪ ರಿಂದ ಈವರೆಗೆ ಹಾವೇರಿ ಜಿಲ್ಲೆಗೆ ಸರ್ಕಾರದಿಂದ ಯಾವ್ಯಾವ ಯೋಜನೆಗಳಡಿ ಎಷ್ಟೆಷ್ಟು ಅನುದಾನ ಬಿಡುಗಡೆಯಾಗಿದೆ ; (ವರ್ಷವಾರು, ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)

(ಆ) ಈ ಅನುದಾನದಲ್ಲಿ ಜಾರಿಗೊಳಿಸಿದ ಕಾರ್ಯಕ್ರಮಗಳು ಯಾವುವು ; ಈ ಕಾರ್ಯಕ್ರಮಗಳಿಗೆ ವೆಚ್ಚ ಮಾಡಿರುವ ಹಣ ಎಷ್ಟು ? (ವರ್ಷವಾರು,ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)

## ೨೦೧೩-೧೪ ರಿಂದ ಸರ್ಕಾರದಿಂದ ಹಾವೇರಿ ಜಿಲ್ಲೆಯ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಗೆ ಬಂದ ಅನುದಾನದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೪೭೨ (೭೦೨) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩-೧೪ ರಿಂದ ಇಲ್ಲಿಯವರೆಗೆ ಸರ್ಕಾರದಿಂದ ಹಾವೇರಿ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಬಂದ ಯೋಜನೆಗಳಾವುವು ; ಮತ್ತು ಈ ಯೋಜನೆಗಳಿಗೆ ಬಂದ ಅನುದಾನ ಎಷ್ಟು ; (ಯೋಜನಾವಾರು, ವರ್ಷಾವಾರು ಅನುದಾನವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ಎಲ್ಲಾ ಯೋಜನೆಗಳು ಸಮರ್ಪಕವಾಗಿವೆಯೇ ; ಹಾಗಿದ್ದಲ್ಲಿ, ಅವು ಯಾವುವು ; ಇದಕ್ಕೆ ಖರ್ಚಾದ ಅನುದಾನ ಎಷ್ಟು ; (ತಾಲ್ಲೂಕುವಾರು, ಯೋಜನೆವಾರು ವಿವರ ನೀಡುವುದು)

(ಇ) ಹಾವೇರಿ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು ಎಷ್ಟು ; ಅವು ಯಾವುವು ; (ಹುದ್ದೆವಾರು, ಆಸ್ಪತ್ರೆವಾರು, ತಾಲ್ಲೂಕುವಾರು ವಿವರ ನೀಡುವುದು)

(ಈ) ೨೦೧೩–೧೪ ರಿಂದ ಇಲ್ಲಿಯವರೆಗೆ ಹಾವೇರಿ ಜಿಲ್ಲೆಯಲ್ಲಿ ಆಸ್ಪತ್ರೆ ನವೀಕರಣಕ್ಕೆ ಹಾಗೂ ಹೊಸ ಕಟ್ಟಡ ಕಾಮಗಾರಿಗಳಿಗೆ ಯಂತ್ರೋಪಕರಣಗಳಿಗೆ ಹಾಗೂ ಪೀಠೋಪಕರಣಗಳಿಗೆ ಸರ್ಕಾರದಿಂದ ಬಂದ ಅನುದಾನ ಎಷ್ಟು ; ಇದರಲ್ಲಿ ಖರ್ಚಾದ ಅನುದಾನ ಎಷ್ಟು ? (ವರ್ಷಾವಾರು, ಕಟ್ಟಡ ನವೀಕರಣ, ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ಕ್ಯಾನ್ಸರ್ ರೋಗದಿಂದ ಬಳಲುತ್ತಿರುವ ರೋಗಿಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–**

೪೭೩ (೬೮೮) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕ್ಯಾನ್ಸರ್ ರೋಗದಿಂದ ಬಳಲುತ್ತಿರುವ ಜನರ ಸಂಖ್ಯೆ ಎಷ್ಟು ; ವಿವಿಧ ಕ್ಯಾನ್ಸರ್ ರೋಗಗಳಿಗೆ ತುತ್ತಾಗಿರುವವರ ಸಂಖ್ಯೆ ಹಾಗೂ ಈ ರೋಗಕ್ಕೆ ಒಳಗಾಗಿರುವ ಪುರುಷ ಮತ್ತು ಮಹಿಳೆಯರ ವಿವರ ನೀಡುವುದು ;

(ಆ) ರಾಜ್ಯದಲ್ಲಿ ಯಾವ ಕ್ಯಾನ್ಸರ್‌ನಿಂದ ಅತೀ ಹೆಚ್ಚು ಜನ ಬಳಲುತ್ತಿರುವರು ;

(ಇ) ರಾಜ್ಯದಲ್ಲಿ ಕ್ಯಾನ್ಸರ್ ಅಂತಹ ಮಾರಕ ರೋಗಕ್ಕೆ ಚಿಕಿತ್ಸೆ ನೀಡಲು ಎಷ್ಟು ಆಸ್ಪತ್ರೆಗಳಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ ;

(ಈ) ವರ್ಷದಿಂದ ವರ್ಷಕ್ಕೆ ಕ್ಯಾನ್ಸರ್ ರೋಗ ಹೆಚ್ಚುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗಿದ್ದು, ಇದು ನಿಜವೇ ; ಹಾಗಿದ್ದಲ್ಲಿ, ಕ್ಯಾನ್ಸರ್ ರೋಗ ಹೆಚ್ಚುತ್ತಿರುವ ಬಗ್ಗೆ ಕಾರಣಗಳೇನು ? (ವಿವರ ನೀಡುವುದು)

## ಸಮಾಜ ಕಲ್ಯಾಣ ಇಲಾಖೆಯ ಐಇಸಿ ಚಟುವಟಿಕೆಗಳ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೪೭೪ (೬೭೭) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿಯ ವಿವಿಧ ಕಾರ್ಯಕ್ರಮಗಳ ಐ.ಇ.ಸಿ ಚಟುವಟಿಕೆಗಳಿಗೆ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ;

(ಆ) ಐ.ಇ.ಸಿ ಚಟುವಟಿಕೆಗಳನ್ನು ಕೈಗೊಳ್ಳಲು ಎನ್.ಜಿ.ಓ ಗಳಿಗೆ ಕಾರ್ಯಾದೇಶ ನೀಡುವಾಗ ಪಾಲಿಸಲಾಗುವ ಮಾರ್ಗದರ್ಶಿ ನಿಯಮಗಳೇನು ; (ವಿವರವಾದ ಮಾಹಿತಿ ನೀಡುವುದು)

(ಇ) ಕೆಲವು ಎನ್.ಜಿ.ಓ ಗಳು ಎಲ್ಲಾ ಯೋಜನೆಗಳ ಐ.ಇ.ಸಿ ಚಟುವಟಿಗಳನ್ನು ನಿರ್ವಹಿಸುತ್ತಿರುವ ಹಿನ್ನಲೆ ಏನು ; ಅವು ಪಾಲಿಸುತ್ತಿರುವ ಪಾರದರ್ಶಕ ನಿಯಮಗಳೇನು ? (ವಿವರವಾದ ಮಾಹಿತಿ ನೀಡುವುದು)

## ರಾಮನಗರ ಜಿಲ್ಲಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದ ನಿರ್ಮಾಣದ ಬಗ್ಗೆ

**ಶ್ರೀ ಸೈಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು):–**

೪೭೫ (೭೧೯) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಮನಗರ ಜಿಲ್ಲಾ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ಮತ್ತು ವೈದ್ಯರು ಹಾಗೂ ಇತರೆ ಸಿಬ್ಬಂದಿಗಳ ವಸತಿ ಗೃಹಗಳ ನಿರ್ಮಾಣಕ್ಕೆ ಮಂಜೂರಾಗಿರುವ ಲೋಕೋಪಯೋಗಿ ಇಲಾಖೆಯ ವಸತಿ ಗೃಹಗಳ ಪ್ರದೇಶದ ೫ ಎಕರೆ ೨೦ ಗುಂಟೆ ಜಮೀನನ್ನು ಯಾವ ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ರಾಮನಗರ ಜಿಲ್ಲಾ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ಕಟ್ಟಡದ ನಿರ್ಮಾಣ ಕಾಮಗಾರಿಯು ನಿಧಾನಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ; ತ್ವರಿತಗತಿಯಲ್ಲಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಸಮಾಜ ಕಲ್ಯಾಣ ಇಲಾಖೆಗೆ ಮೀಸಲಿರುವ ಹಣದ ಬಗ್ಗೆ

**ಶ್ರೀ ಸೈಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು):–**

೪೭೬ (೪೫೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೭–೧೮ನೇ ಸಾಲಿನ ಆಯವ್ಯಯದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಮೀಸಲಿಟ್ಟ ಹಾಗೂ ಬಿಡುಗಡೆಯಾದ ಅನುದಾನದ

ಮೊತ್ತವೆಷ್ಟು; ಖರ್ಚು ಮಾಡಿದ ಹಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ನಿಗಧಿಪಡಿಸಿ ಬಿಡುಗಡೆ ಮಾಡಿದ ಹಣವೆಷ್ಟು; ಈ ಅನುದಾನದಲ್ಲಿ ಕೈಗೊಳ್ಳಲಾದ ಕಾಮಗಾರಿಗಳಾವುವು ? (ಇತ್ತೀಚಿನ ಪ್ರಗತಿಯ ಸಂಪೂರ್ಣ ವಿವರಗಳನ್ನು ವರ್ಷವಾರು ಯೋಜನೆವಾರು ನೀಡುವುದು)

## ಅಮಾನತ್ತಾದ ಪಡಿತರ ನ್ಯಾಯಬೆಲೆ ಅಂಗಡಿಗಳ ಬಗ್ಗೆ

**ಶ್ರೀ ಸೈಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು):–**

೪೭೭ (೪೬೦) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿವಿಧ ಪ್ರಕರಣಗಳಡಿ ಅಮಾನತ್ತಾದ ಪಡಿತರ ನ್ಯಾಯಬೆಲೆ ಅಂಗಡಿಗಳೆಷ್ಟು ; ಈ ರೀತಿ ಅಮಾನತ್ತಾದ ನ್ಯಾಯಬೆಲೆ ಅಂಗಡಿಗಳನ್ನು ಮುಂದುವರೆಸಲು ಪರ್ಯಾಯ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ನೀಡುವುದು)

(ಆ) ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸಲು ಯಾವ ಹಂತದ ಅಧಿಕಾರಿಯನ್ನು ನೇಮಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹೊಸದಾಗಿ ಎಷ್ಟು ಪಡಿತರ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ ;

(ಈ) ಹಾಗಿದ್ದಲ್ಲಿ, ಹೊಸದಾಗಿ ಪಡಿತರ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಇರುವ ಮಾನದಂಡಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಹೊಸ ಪಡಿತರ ಚೀಟಿ ವಿತರಣೆ ಕುರಿತು

**ಶ್ರೀ ಸೈಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು):–**

೪೭೮ (೪೬೧) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹೊಸ ಪಡಿತರ ಚೀಟಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು ; ಇದುವರೆಗೂ ವಿಲೇವಾರಿಯಾದ ಅರ್ಜಿಗಳೆಷ್ಟು ; ಬಾಕಿ ಉಳಿದಿರುವ ಅರ್ಜಿಗಳೆಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಪಡಿತರ ಚೀಟಿಗಳ ವಿತರಣೆ ಮಾಡಲು ಅನುಸರಿಸಲಾಗುವ ಮಾನದಂಡಗಳೇನು ; (ವಿವರ ನೀಡುವುದು)

(ಇ) ಪಡಿತರ ಚೀಟಿಗಳಿಗಾಗಿ ಅರ್ಜಿ ಸಲ್ಲಿಸಿ ವರ್ಷಗಳೇ ಕಳೆದರೂ ಸಹ ಇದುವರೆವಿಗೂ ಪಡಿತರ ಚೀಟಿಗಳನ್ನು ವಿತರಿಸದಿರಲು ಕಾರಣಗಳೇನು ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯವರು ಮತ್ತು ಸಹಾಯಕರ ಗೌರವಧನದ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–**

೪೭೯ (೪೫೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು ;

(ಆ) ಈ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಇವರಿಗೆ ಮಾಸಿಕವಾಗಿ ನೀಡುತ್ತಿರುವ ಗೌರವಧನ ಎಷ್ಟು;

(ಈ) ಇವರಿಗೆ ನೀಡುತ್ತಿರುವ ಗೌರವಧನ ಕಡಿಮೆಯಾಗಿದ್ದು, ಇದರಿಂದ ಇವರ ಜೀವನ ನಿರ್ವಹಣೆ ಕಷ್ಟಕರವಾಗಿರುವುದು ಸರ್ಕಾರದ ಗಮನದಲ್ಲಿ ಇದೆಯೇ ;

(ಉ) ಇವರ ಕೆಲಸದ ಅವಧಿಯನ್ನು ೬ ೧/೨ ಗಂಟೆಯಿಂದ ೮ ಗಂಟೆಗೆ ಹೆಚ್ಚಿಸಿ–ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನವನ್ನು ನೀಡಲು ಸರ್ಕಾರ ಕ್ರಮಕೈಗೊಳ್ಳುವುದೇ ;

(ಊ) ಈ ನಿಟ್ಟಿನಲ್ಲಿ ಸರ್ಕಾರದ ನಿಲುವೇನು ; ಈ ಸಂಬಂಧವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಆಯುಷ್ ಇಲಾಖೆಯ ಲಿಪಿಕ ನೌಕರರ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–**

೪೮೦ (೬೭೦) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಯುಷ್ ಇಲಾಖೆಯಿಂದ ಲಿಪಿಕ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳು ಸರ್ಕಾರಿ ಸೇವೆಗೆ ಸೇರಿದ ದಿನಾಂಕದಿಂದ ೩೦ ವರ್ಷಗಳಿಗೆ ಮೇಲ್ಪಟ್ಟು ಬೆಂಗಳೂರು ನಗರದಲ್ಲಿಯೇ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ; ಇವರುಗಳು ಬೆಂಗಳೂರಿನಲ್ಲಿಯೇ ಕಾರ್ಯನಿರ್ವಹಿಸಲು ಕಾರಣಗಳೇನು ; (ವಿವರ ನೀಡುವುದು)

(ಆ) ಆಯುಷ್ ಇಲಾಖೆಯ ಲಿಪಿಕ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಮೂರು ಪದೋನ್ನತಿ ಪಡೆದ ನಂತರವೂ ಬೆಂಗಳೂರಿನಲ್ಲಿಯೇ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಆಯುಷ್ ಇಲಾಖೆಯ ಲಿಪಿಕ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಮೇಲಿನ ಹುದ್ದೆಗೆ ಪದೋನ್ನತಿ ಪಡೆದ ನಂತರವೂ ಅದೇ ಹುದ್ದೆ / ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವವರ ವಿವರ ನೀಡುವುದು ;

(ಈ) ಆಯುಷ್ ನಿರ್ದೇಶನಾಲಯದ ಆಯವ್ಯಯದ ವಿಭಾಗದ ಅಧೀಕ್ಷಕರು ಅದೇ ಸ್ಥಳದಲ್ಲಿ ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ ; ಇವರಿಗೆ ಪದೋನ್ನತಿ ನೀಡಲು ಸಹಾಯಕ ಆಡಳಿತ ಹುದ್ದೆಯನ್ನು ಬೇರೆ ಕಛೇರಿಯಿಂದ ಸ್ಥಳಾಂತರಿಸಿ ಅವರಿಗೆ ಪದೋನ್ನತಿ ನೀಡಿ ಅವರನ್ನು ಅದೇ

ಹುದ್ದೆಯಲ್ಲಿ ಮುಂದುವರೆಸಲಾಗಿದೆಯೇ ; ಇದ್ದಲ್ಲಿ, ಕಾರಣಗಳೇನು ;

(ಉ) ಕಳೆದ ಐದು ವರ್ಷಗಳಿಂದ ಕೌನ್ಸಲಿಂಗ್ ಮುಖಾಂತರ ವರ್ಗಾವಣೆಯಾದ ಲಿಪಿಕ ನೌಕರರ ಸಂಖ್ಯೆ ಎಷ್ಟು ; ಕೌನ್ಸಲಿಂಗ್ ಹೊರತುಪಡಿಸಿ ವರ್ಗಾವಣೆಯಾದ ಲಿಪಿಕ ನೌಕರರ ಸಂಖ್ಯೆ ಎಷ್ಟು ; ಅವಧಿ ಪೂರ್ಣಗೊಳ್ಳದೆ ವರ್ಗಾವಣೆಯಾದ ನೌಕರರ ಸಂಖ್ಯೆ ಎಷ್ಟು ?(ವಿವರ ನೀಡುವುದು)

## ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–**

೪೮೧ (೬೭೧) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿರುವ ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಿಂದ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ; (ವಿವರ ನೀಡುವುದು)

(ಇ) ಮೇಲ್ದರ್ಜೆಗೇರಿಸಲು ಅನುಸರಿಸುವ ಮಾನದಂಡಗಳೇನು ; (ವಿವರ ನೀಡುವುದು)

(ಈ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಗ್ರಾಮ ಹೋಬಳಿ ಕೇಂದ್ರವಾಗಿದ್ದು ಅದರ ಸುತ್ತ–ಮುತ್ತ ೪೦ ಹಳ್ಳಿಗಳು

ಬರುತ್ತಿರುವುದರಿಂದ ಕೊಪ್ಪದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗುವುದು ಯಾವಾಗ ; (ವಿವರ ನೀಡುವುದು)

(ಉ) ಈ ಕೇಂದ್ರವನ್ನು ಮೇಲ್ದರ್ಜೆಗೇರಿಸಿ ಹೆಚ್ಚಿನ ವೈದ್ಯ ಸಿಬ್ಬಂದಿ ಮತ್ತು ಸೌಲಭ್ಯವನ್ನು ನೀಡಿ ೨೪ ಗಂಟೆ ಚಿಕಿತ್ಸೆ ನೀಡುವಂತೆ ಕ್ರಮ ಕೈಗೊಳ್ಳಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ವಿವರ ನೀಡುವುದು)

## ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–**

೪೮೩ (೪೨೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) 'ಕನ್ನಡ ಭಾಷೆಗೆ' ಶಾಸ್ತ್ರೀಯ ಸ್ಥಾನ–ಮಾನ ಯಾವಾಗ ದೊರಕಿದೆ ;

(ಆ) ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆಯೇ ;

(ಇ) ಇಲ್ಲವಾದಲ್ಲಿ, ಸ್ಥಾಪನೆ ಮಾಡದೆ ಇರಲು ಕಾರಣ ಏನು ಮತ್ತು ಯಾವಾಗ ಸ್ಥಾಪಿಸಲಾಗುವುದು ;

(ಈ) ಈ ಅಧ್ಯಯಾನ ಕೇಂದ್ರದ ಆಡಳಿತ ನಿರ್ವಹಣೆಗಾಗಿ ಆಡಳಿತ ಮಂಡಳಿ, ತಜ್ಞರ ಸಮಿತಿ ಹಾಗೂ ಸಿಬ್ಬಂದಿಯುನ್ನು ನೇಮಿಸಲಾಗಿದೆಯೇ ;

(ಉ) ಇಲ್ಲವಾದಲ್ಲಿ ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?

## ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–**

೪೮೪ (೬೬೯) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯನ್ನು ಯಾವಾಗ ಸ್ಥಾಪಿಸಲಾಗಿದೆ ; ಎಂದು ಸ್ಥಾಪಿತವಾಗಿದೆ ; ಸ್ಥಾಪಿತವಾದ ದಿನಾಂಕದಿಂದ ಡಿಸೆಂಬರ್–೨೦೧೭ರ ಅಂತ್ಯಕ್ಕೆ ಆಯುರ್ವೇದ ಮತ್ತು ಯುನಾನಿಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದು ನೋಂದಣಿಯಾದವರ ಸಂಖ್ಯೆ ಎಷ್ಟು ; ಪದವಿ ಇಲ್ಲದೆ ಇತರೆ ಪ್ರಮಾಣ ಪತ್ರ ಮತ್ತು ಪಾರಂಪರಿಕ ವೃತ್ತಿಯಿಂದ ನೋಂದಣಿ ಪಡೆದವರ ಸಂಖ್ಯೆ ಎಷ್ಟು ; ೨೦೧೭ನೇ ವರ್ಷದಲ್ಲಿ ನೋಂದಣಿ ಪಡೆದ ಆಯುರ್ವೇದ ಮತ್ತು ಯುನಾನಿ ವೈದ್ಯರ ಸಂಖ್ಯೆ ಎಷ್ಟು ;

(ಆ) ಯಾವ ಯಾವ ವಿದ್ಯಾರ್ಹತೆ ಹೊಂದಿರುವ ಜನರಿಗೆ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯಲ್ಲಿ ವೈದ್ಯ ವೃತ್ತಿ ನಡೆಸಲು ನೋಂದಣಿ ಮಾಡಿಕೊಡಲಾಗುತ್ತದೆ ;

(ಇ) ಆಯುರ್ವೇದ ಮತ್ತು ಯುನಾನಿ ಮಂಡಳಿಯಲ್ಲಿ ವೈದ್ಯ ವಿದ್ವಾನ್ ಪ್ರಮಾಣ ಪತ್ರದ ಮೇಲೆ ಎಷ್ಟು ಜನರಿಗೆ ನೋಂದಣಿ ಮಾಡಲಾಗಿದೆ ; ನೋಂದಣಿ ಮಾಡಿದ ಅಧಿಕಾರಿ ಯಾರು ; ಯಾವ ವರ್ಷಗಳಲ್ಲಿ ನೋಂದಣಿ ಮಾಡಿದೆ ; ಈ ಪ್ರಮಾಣ ಪತ್ರವನ್ನು ಯಾವ ಸಂಸ್ಥೆ ಮತ್ತು ವಿಶ್ವವಿದ್ಯಾಲಯದವರು ನೀಡಿದ್ದಾರೆ ; (ವಿವರ ನೀಡುವುದು)

(ಈ) ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯಲ್ಲಿ ನಕಲಿ ವೈದ್ಯರು ಎಂದು ಗುರುತಿಸಲಾದವರ ಸಂಖ್ಯೆ ಎಷ್ಟು; ಗುರುತಿಸಲಾದ ನಕಲಿ ವೈದ್ಯರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ರಾಜ್ಯದಲ್ಲಿ ನಕಲಿ ವೈದ್ಯ ವೃತ್ತಿ ನಡೆಸುತ್ತಿರುವವರ ಒಟ್ಟು ಸಂಖ್ಯೆ ಎಷ್ಟು;

(ಉ) ಆಯುರ್ವೇದ ಮತ್ತು ಯುನಾನಿ ಪದ್ಧತಿಯಲ್ಲಿ ಪದವಿ ಪಡೆದು ಅಲೋಪತಿ ವೈದ್ಯ ವೃತ್ತಿ ನಡೆಸಲು ಸರ್ಕಾರ ಅನುಮತಿ ನೀಡಿದೆಯೇ; ನೀಡಿದ್ದಲ್ಲಿ, ಈ ಪದವೀಧರರಿಗೆ ಪ್ರತ್ಯೇಕ ನೋಂದಣಿ ಮಾಡುವ ಮಂಡಳಿಯ ಅವಶ್ಯಕತೆ ಇದೆಯೇ; ಇಲ್ಲದಿದ್ದಲ್ಲಿ, ಆಯುರ್ವೇದ ಮತ್ತು ಯುನಾನಿ ಮಂಡಳಿಯನ್ನು ರದ್ದುಪಡಿಸಿ ವಿಶ್ವ ವಿದ್ಯಾಲಯಗಳಿಂದ ವೈದ್ಯ ಪದವಿ ಪಡೆದ ಎಲ್ಲಾ ಪದ್ಧತಿಯವರಿಗೂ ಒಂದೇ ಮಂಡಳಿಯಿಂದ ನೋಂದಣಿ ಮಾಡಿಸಲು ಅವಕಾಶ ಕಲ್ಪಿಸಲಾಗುವುದೇ ?

## ಪಡಿತರ ಧಾನ್ಯಗಳ ಸೋರಿಕೆ ನಕಲಿ ಕಾರ್ಡ್‌ಗಳ ದಂಧೆ ಹಾಗೂ ಅನ್ನಭಾಗ್ಯದಲ್ಲಿ ಅಕ್ರಮಗಳ ಕುರಿತು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):–**

೪೮೫ (೬೦೨) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪಡಿತರ ಧಾನ್ಯ ಸೋರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ನಕಲಿ ಕಾರ್ಡ್‌ಗಳ ಕರಾಳದಂಧೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ಅನ್ನಭಾಗ್ಯ ಸೇರಿದಂತೆ ಹಲವು ಚಟುವಟಿಕೆಗಳಲ್ಲಿ ಭಾಗಿಯಾದವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಈ ರೀತಿಯ ಎಷ್ಟು ಅಪರಾಧಗಳು ದಾಖಲಾಗಿವೆ ; ಅಪರಾಧಗಳಲ್ಲಿ ಭಾಗಿಯಾದವರಿಗೆ ವಿಧಿಸಿರುವ ಶಿಕ್ಷೆ ಏನು ?

## ಪ್ರವಾಸಿ ತಾಣಗಳ ಕುರಿತು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):–**

೪೮೬ (೬೦೩) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಇತ್ತೀಚಿನ ದಿನಗಳಲ್ಲಿ ಪ್ರವಾಸಿ ತಾಣಗಳಲ್ಲಿ ಸುಲಿಗೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪ್ರವಾಸಿ ತಾಣಗಳಲ್ಲಿರುವ ಮಾಹಿತಿ ಕೇಂದ್ರಗಳ ಸ್ಥಿತಿಗತಿಗಳೇನು ; (ವಿವರ ನೀಡುವುದು)

(ಇ) ಪ್ರವಾಸಿ ತಾಣಗಳಲ್ಲಿರುವ ಹೋಟೆಲ್ / ಲಾಡ್ಜ್ / ಸೈಟ್–ಸೀಯಿಂಗ್ / ಆಟೋ–ಟ್ಯಾಕ್ಸಿಗಳ ದರ ನಿಗದಿಪಡಿಸುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ ; ಇದ್ದಲ್ಲಿ, ಮಾಹಿತಿ ನೀಡುವುದು ?

## ಪಡಿತರ ಕುಟುಂಬಗಳು ಮತ್ತು ಪಡಿತರ ವ್ಯವಸ್ಥೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೪೮೭ (೪೫೦) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಾಸಿಸುತ್ತಿರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು ; ಅವುಗಳ ಪೈಕಿ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಸೌಲಭ್ಯ ಪಡೆದ ಕುಟುಂಬಗಳ ಸಂಖ್ಯೆ ಎಷ್ಟು; (ಪೂರ್ಣ ವಿವರ ನೀಡುವುದು)

(ಆ) ಈ ಪಡಿತರ ಕುಟುಂಬಗಳಿಗೆ ಮಾಹೆಯಾನ ಯಾವ ಬೆಲೆಯಲ್ಲಿ ಯಾವ ಯಾವ ಆಹಾರ ಪದಾರ್ಥಗಳನ್ನು ಎಷ್ಟು ಪ್ರಮಾಣದಲ್ಲಿ ನೀಡಲಾಗುತ್ತಿದೆ ; (ವಿವರ ನೀಡುವುದು)

(ಇ) "ಅನ್ನಭಾಗ್ಯ" ಯೋಜನೆ ಜಾರಿಯಲ್ಲಿದೆಯೇ ; ಇದ್ದಲ್ಲಿ ಪ್ರತಿ ತಿಂಗಳು ಎಷ್ಟು ಜನ ಪಡಿತರದಾರರಿಗೆ, ಎಷ್ಟು ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ನೀಡಲಾಗುತ್ತಿದೆ ;

(ಈ) ಇದಕ್ಕಾಗಿ ಮಾಹೆಯಾನ ಸರ್ಕಾರಕ್ಕೆ ತಗಲುತ್ತಿರುವ ವೆಚ್ಚವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ಮೀಸಲಾತಿ ಪ್ರಮಾಣ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೪೮೮ (೪೪೯) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ಜಾತಿ (ಒಬಿಸಿ), ಅಲ್ಪ ಸಂಖ್ಯಾತರು ಹಾಗೂ ಇತರೆ ಜಾತಿಗಳಿಗೆ ಸೇರಿದ ಜನಸಂಖ್ಯೆ ಪ್ರಮಾಣವೆಷ್ಟು ; ವರ್ಗವಾರು ತಾಲ್ಲೂಕುವಾರು ಜನಸಂಖ್ಯೆ ವಿವರ ನೀಡುವುದು)

(ಆ) ಈ ವರ್ಗದ ಜನರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅನುಕ್ರಮವಾಗಿ ನೀಡಿರುವ ಮೀಸಲಾತಿ ಪ್ರಮಾಣ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ಜನರಲ್ ತಿಮ್ಮಯ್ಯನವರು ಹುಟ್ಟಿದ ದಿನವನ್ನು ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೪೮೯ (೬೩೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗಿನ ವೀರ ಸೇನಾನಿ ಜನರಲ್ ತಿಮ್ಮಯ್ಯನವರ ಹುಟ್ಟಿದ ದಿನವನ್ನು ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಇದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಇ) ಯಾವ ಕಾಲಮಿತಿಯೊಳಗೆ ಜನರಲ್ ತಿಮ್ಮಯ್ಯನವರ ಹುಟ್ಟಿದ ದಿನವನ್ನು ಸರ್ಕಾರಿ ಕಾರ್ಯಕ್ರವಾಗಿ ಆಚರಿಸುವ ಕುರಿತು ಆದೇಶ ಹೊರಡಿಸಲಾಗುವುದು?

## ಮಕ್ಕಳನ್ನು ಕಿಡ್ನಾಪ್ ಮಾಡಿ ಭಿಕ್ಷಾಟನೆಗೆ ತೊಡಗಿಸುತ್ತಿರುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೪೯೦ (೬೩೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಕ್ಕಳನ್ನು ಕಿಡ್ನಾಪ್ ಮಾಡಿ, ಬೇರೆ ಕಡೆಯಲ್ಲಿ ಭಿಕ್ಷಾಟನೆಗೆ ತೊಡಗಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಮಕ್ಕಳನ್ನು ಭಿಕ್ಷಾಟನೆಗೆ ತೊಡಗಿಸಿರುವವರ ವಿರುದ್ಧ ಸರ್ಕಾರ ಎಷ್ಟು ಪ್ರಕರಣಗಳನ್ನು ದಾಖಲಿಸಿ ಶಿಕ್ಷೆಗೆ ಒಳಪಡಿಸಿದೆ ;

(ಈ) ಭಿಕ್ಷಾಟನೆಯಲ್ಲಿ ತೊಡಗಿ ಸಿಕ್ಕಿಬಿದ್ದಿರುವ ಎಷ್ಟು ಮಕ್ಕಳಿಗೆ ಕಳೆದ ೫ ವರ್ಷಗಳಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ ?

## ಬೀದರ್ ಬ್ರಿಮ್ಸ್ ಬೋಧಕ ಆಸ್ಪತ್ರೆಯ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೯೧ (೭೨೪) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಬ್ರಿಮ್ಸ್ ಬೋಧಕ ಆಸ್ಪತ್ರೆಯ ನೂತನ ಕಟ್ಟಡಕ್ಕೆ ಮಾಡಿದ ವೆಚ್ಚ ಎಷ್ಟು ; ಮೂಲ ಅಂದಾಜು ಪಟ್ಟಿಯಲ್ಲಿ ಇರುವಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆಯೇ ; ವೆಚ್ಚ ಪರಿಷ್ಕೃತಗೊಂಡಿದ್ದಲ್ಲಿ, ಎಷ್ಟು ಹಣ ಹೆಚ್ಚುವರಿಯಾಗಿ ಖರ್ಚು ಮಾಡಲಾಗಿದೆ ;

(ಆ) ಆಗಸ್ಟ್ ೧೫ ರಂದು ಮಾನ್ಯ ಮುಖ್ಯಮಂತ್ರಿಯವರು ಉದ್ಘಾಟಿಸಿದ ಹೊಸ ಕಟ್ಟಡಕ್ಕೆ ಬೋಧಕ ಆಸ್ಪತ್ರೆಯನ್ನು ಸ್ಥಳಾಂತರಿಸಲಾಗಿದೆಯೇ; ಸ್ಥಳಾಂತರಿಸಿದ್ದಲ್ಲಿ ಎಷ್ಟು ವಿಭಾಗಗಳನ್ನು ಸ್ಥಳಾಂತರಿಸಲಾಗಿದೆ;

(ಇ) ಹೊಸ ಆಸ್ಪತ್ರೆಗೆ ಕಟ್ಟಡ ಪೂರ್ಣಗೊಂಡಿದೆಯೇ ; ಪೂರ್ಣಗೊಳ್ಳದಿರಲು ಕಾರಣಗಳೇನು ?

## ಹಿಂದುಳಿದ ಆಯೋಗದ ಶಿಫಾರಸ್ಸಿನ ಮೇರೆಗೆ ಮರಾಠ ಸಮಾಜವನ್ನು ೩ಬಿ ಯಿಂದ ೨ಎ ಪ್ರವರ್ಗಕ್ಕೆ ಸೇರಿಸುವ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೯೨ (೭೩೦) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನ ಮೇರೆಗೆ ಮರಾಠ ಸಮಾಜಕ್ಕೆ ೩ ಬಿ ಯಿಂದ ೨ಎ ಪ್ರವರ್ಗಕ್ಕೆ ಸೇರಿಸಬೇಕು ಎನ್ನುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ರಾಜರ್ಷಿ ಶಾಹು ಮಹಾರಾಜ ಮರಾಠ ವಿಕಾಸ ಮಹಾಮಂಡಳಿ ಸ್ಥಾಪಿಸಿ, ಮರಾಠ ಸಮಾಜಕ್ಕೆ ಆರ್ಥಿಕ ಮತ್ತು ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ರಾಜರ್ಷಿ ಶಾಹು ಮಹಾರಾಜ ಅಧ್ಯಯನ ಪೀಠ ಸ್ಥಾಪಿಸಲು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಬಜೆಟ್‌ನಲ್ಲಿ ಐದು ಕೋಟಿ ನೀಡಲಾಗಿದ್ದು, ಇಲ್ಲಿಯವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ವೃಂದ ಮತ್ತು ನೇಮಕಾತಿ ನಿಯಮ ಅಳವಡಿಸದೆ ಪದನಾಮ ಬದಲಾವಣೆ ರದ್ದು ಪಡಿಸುವ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೯೩ (೭೩೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಲ ಭವನ ಸೊಸೈಟಿಯಲ್ಲಿ ವೃಂದ ಮತ್ತು ನೇಮಕಾತಿ ನಿಯುವಮಾವಳಿಗಳನ್ನು ಅಳವಡಿಸಿದೆಯೇ ಕರ್ತವ್ಯ

ನಿರ್ವಹಿಸುತ್ತಿರುವ ಕೆಲವು ವೃಂದದ ಹುದ್ದೆಗಳಿಗೆ ಮಾತ್ರ ನಾಮಾಂಕಿತವನ್ನು ಬದಲಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹುದ್ದೆಗಳ ನಾಮಾಂಕಿತ ಬದಾವಣೆಯಿಂದಾಗಿ ಪ್ರಸ್ತುತ ಬಾಲ ಭವನ ಸೊಸೈಟಿಯಲ್ಲಿ ದಿ ಬಾಲ ಭವನ ಸೊಸೈಟಿ ಎಂಪ್ಲಾಯಿಸ್ ಸರ್ವಿಸ್ ರೂಲ್ಸ್ ೧೯೯೧ ರಡಿಯಲ್ಲಿ ಸಕ್ರಮಗೊಂಡಿರುವ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇತರೆ ನೌಕರರಿಗೆ ಅನ್ಯಾಯ ಮಾಡಿದಂತಾಗಿರುವುದಿಲ್ಲವೆ ;

(ಇ) ಬಾಲ ಭವನ ಸೊಸೈಟಿಗೆ ಸರ್ಕಾರ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲು ಹಲವಾರು ಬಾರಿ ಆದೇಶ ನೀಡಿದ್ದರೂ ಸಹ ಯಾವುದೇ ಕ್ರಮ ಜರುಗಿಸದೆ ಇರುವುದರಿಂದ, ವಯೋ ನಿವೃತ್ತಿ ಅಂಚಿನಲ್ಲಿರುವ ನೌಕರರಿಗೆ ಅನ್ಯಾಯ ಎಸಗಿದಂತೆ ಆಗಿರುವುದಿಲ್ಲವೆ;

(ಈ) ನೌಕರರಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ನಿಯಮಾವಳಿಗಳನ್ನು ರೂಪಿಸಬೇಕಾದಲ್ಲಿ ಈ ಹಿಂದೆ ಸರ್ಕಾರದಿಂದ ಅನುಮೋದನೆಯನ್ನು ಪಡೆದಿದ್ದರೂ ಸಹ ಈ ಹುದ್ದೆಯ ನಾಮಾಂಕಿತ ಬದಲಾವಣೆಗೆ ಸರ್ಕಾರದಿಂದ ಏಕೆ ಅನುಮೋದನೆ ಪಡೆದಿರುವುದಿಲ್ಲ;

(ಉ) ಹಾಗಿದ್ದಲ್ಲಿ, ಈ ಹುದ್ದೆಗಳ ನಾಮಾಂಕಿತ ಬದಲಾವಣೆಯನ್ನು ರದ್ದುಪಡಿಸಿ ಸರ್ಕಾರ ಕ್ರಮ ಜರುಗಿಸಲಾಗಿಸುವುದೇ ?

## ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯ ಕಲ್ಯಾಣ ಕಾರ್ಯಕ್ರಮದ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೯೪ (೭೩೪) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೦೯ ರಿಂದ ಪ್ರಸ್ತುತದವರೆಗೂ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ಸರ್ಕಾರ ನೀಡಿದ ಅನುದಾನ ಎಷ್ಟು ; ಖರ್ಚಾಗಿರುವ ಅನುದಾನ ಎಷ್ಟು ; ಬಾಕಿ ಇರುವ ಅನುದಾನ ಎಷ್ಟು ;

(ಆ) ೨೦೦೯ ರಿಂದ ಇದುವರೆವಿಗೂ ಯಾವ ಕೈಗಾರಿಕಾ ಬಡಾವಣೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಿವೇಶನಗಳನ್ನು ಹಂಚಲಾಗಿದೆ ; ಹಂಚಿಕೆದಾರರ ಹೆಸರು, ನಿವೇಶನ ವಿಸ್ತೀರ್ಣ ಮತು ಅವರಿಗೆ ನೀಡಲಾದ ಧನಸಹಾಯದ ಮೊತ್ತ ಎಷ್ಟು ;

(ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹಂಚಿಕೆಯಾದ ನಿವೇಶನಗಳ ಪೈಕಿ ನಿಗಧಿತ ದರವನ್ನು ಪಾವತಿಸದೆ ವಜಾ ಮಾಡಲಾದ ನಿವೇಶನಗಳ ಸಂಖ್ಯೆ ಎಷ್ಟು ; ವಜಾ ಮಾಡಲಾದ ಹಂಚಿಕೆದಾರರ ಹೆಸರು ಮತ್ತು ವಿಳಾಸ ಹಾಗೂ ನಿವೇಶನದ ವಿಸ್ತೀರ್ಣ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ;

(ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನೀಡಲಾದ ಕೈಗಾರಿಕಾ ನಿವೇಶನಗಳಲ್ಲಿ ಯೋಜನೆ ಜಾರಿ ಮಾಡದೆ ಇರುವುದರಿಂದ ಮಂಡಳಿಯು ವಜಾ ಮಾಡಲಾದ ನಿವೇಶನಗಳ ಸಂಖ್ಯೆ, ಹೆಸರು ಮತ್ತು ವಿಳಾಸವನ್ನು ಹಾಗೂ ಯಾವ ಕಾರಣಕ್ಕಾಗಿ ವಜಾ ಮಾಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡುವುದು?

## ಎಸ್.ಟಿ. ಕಾಲೋನಿಗೆ ಅನುದಾನ ಹಂಚಿಕೆ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೯೫ (೭೩೨) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕಿನಲ್ಲಿ ಇರುವ ಒಟ್ಟು ಎಸ್.ಟಿ. ಕಾಲೋನಿಗಳ ಸಂಖ್ಯೆ ಎಷ್ಟು ; ಈ ಕಾಲೋನಿಗಳಿಗೆ ೨೦೧೫–೧೬ ರಿಂದ ೨೦೧೭–೧೮ ನೇ ಸಾಲಿನವರೆಗೆ ಸರ್ಕಾರ ಮಂಜೂರು ಮಾಡಿರುವ ಅನುದಾನ ಎಷ್ಟು ;

(ಆ) ಬಾಗೇಪಲ್ಲಿ ತಾಲ್ಲೂಕಿನಲ್ಲಿರುವ ಎಸ್.ಟಿ. ಕಾಲೋನಿಗಳ ಮೂಲಭೂತ ಸೌಕರ್ಯಕ್ಕಾಗಿ ಬಿಡುಗಡೆಯಾದ ಅನುದಾನದ ಬಳಕೆಯಲ್ಲಿ ಮೇಲ್ನೋಟಕ್ಕೆ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದೇ ;

(ಈ) ೨೦೧೪–೧೫ ರಿಂದ ೨೦೧೭–೧೮ ನೇ ಸಾಲಿನವರೆಗೆ ಬಾಗೇಪಲ್ಲಿ ತಾಲ್ಲೂಕಿನ ಎಸ್.ಸಿ/ಎಸ್‌ಟಿ ವಿದ್ಯಾರ್ಥಿ ನಿಲಯಗಳಿಗೆ ತಾಲ್ಲೂಕು ಪಂಚಾಯಿತಿ ರಾಜ್ಯ ವಲಯದಿಂದ ದುರಸ್ತಿಗಾಗಿ ಬಿಡುಗಡೆಯಾದ ಅನುದಾನ ಎಷ್ಟು ; ಇದರ ಆದೇಶದ ಪ್ರತಿಯನ್ನು ನೀಡುವುದು ;

(ಉ) ಯಾವ ಯಾವ ವಿದ್ಯಾರ್ಥಿ ನಿಲಯಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ? (ಮಾಹಿತಿ ಒದಗಿಸುವುದು)

## ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆ ಅನುದಾನ ಬಳಕೆ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೯೬ (೭೩೩) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯ ಅನುದಾನದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ ;

(ಆ) ಈ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಟ್ಯಾಕ್ಸಿ ಕೊಳ್ಳಲು ಎಷ್ಟು ಮಂದಿಗೆ ಸೌಲಭ್ಯವನ್ನು ನೀಡಲಾಗಿದೆ ;

(ಇ) ೨೦೧೭–೧೮ನೇ ಸಾಲಿನಲ್ಲಿ ಸೌಲಭ್ಯ ನೀಡಲಾದ ಫಲಾನುಭವಿಗಳ ಹೆಸರು ವಿಳಾಸ ಮತ್ತು ಅನುದಾನದ ಮೊತ್ತ ಜಿಲ್ಲಾವಾರು ಮಾಹಿತಿ ನೀಡುವುದು ?

## ಕುಮಾರವ್ಯಾಸರ ಜಯಂತಿ ಆಚರಣೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೯೭ (೭೩೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಈ ಹಿಂದೆ ನಡೆದ ಬೆಳಗಾವಿ ಅಧಿವೇಶನದಲ್ಲಿ ಕುಮಾರ ವ್ಯಾಸರ ಜಯಂತಿಯನ್ನು ಈ ವರ್ಷದಿಂದ ಆಚರಣೆ ಮಾಡಲಾಗುವುದೆಂದು ಸರ್ಕಾರ ಒಪ್ಪಿರುತ್ತದೆಯೇ ;

(ಆ) ಹಾಗಿದ್ದಲ್ಲಿ, ಎಂದಿನಿಂದ ಕುಮಾರ ವ್ಯಾಸರ ಜಯಂತಿಯನ್ನು ಆಚರಿಸಲಾಗುತ್ತಿದೆ ; ಈ ಬಗ್ಗೆ ಸರ್ಕಾರ ಜರುಗಿಸಿದ ಕ್ರಮದ ಮಾಹಿತಿಯನ್ನು ನೀಡುವುದು?

## ಆರೋಗ್ಯ ಇಲಾಖೆಯಿಂದ ಹಮ್ಮಿಕೊಂಡಂತಹ ಯೋಜನೆಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೪೯೮ (೬೩೫) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಆರೋಗ್ಯ ಇಲಾಖೆಯಿಂದ ಹಮ್ಮಿಕೊಂಡಿರುವ ವಿವಿಧ ಯೋಜನೆಗಳು ಯಾವುವು ; ಎಷ್ಟು ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು ; (ಯೋಜನೆಗಳ ವಿವರ ನೀಡುವುದು)

(ಆ) ೨೦೧೬–೧೭ನೇ ಸಾಲಿನಲ್ಲಿ ಇಲಾಖೆಯಿಂದ ಖಾಸಗಿ ಆಸ್ಪತ್ರೆಗಳಿಗೆ ವಿವಿಧ ಯೋಜನೆಗಳಿಗೆ ಅನ್ವಯ ನೀಡಲಾದ ಒಟ್ಟು ಹಣ ಎಷ್ಟು ; (ವಿವರ ಒದಗಿಸುವುದು)

(ಇ) ರಾಜ್ಯದಲ್ಲಿ ಒಟ್ಟು ಕಾರ್ಯನಿರ್ವಹಿಸುತ್ತಿರುವ ಖಾಸಗಿ ನೋಂದಾಯಿತ ಆಸ್ಪತ್ರೆಗಳು ಎಷ್ಟು ; ಕಾನೂನು ಬಾಹಿರವಾಗಿ ನಡೆಸುತ್ತಿರುವ ಆಸ್ಪತ್ರೆಗಳು ಎಷ್ಟು ; (ವಿವರ ಒದಗಿಸುವುದು)

(ಈ) ಸರ್ಕಾರಿ ವೈದ್ಯರುಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಅವಕಾಶ ನೀಡಲಾಗಿದೆಯೇ ; ನೀಡಲಾಗಿದ್ದರೆ ವಿವರ ಒದಗಿಸುವುದು;

(ಉ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞ ವೈದ್ಯರ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು)

## ರಾಜ್ಯದಲ್ಲಿ ಗ್ರಾಹಕರ ಕಾಯಿದೆಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೪೯೯ (೬೩೨) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೬–೧೭ ಮತ್ತು ೨೦೧೭–೧೮ನೇ ಸಾಲುಗಳಲ್ಲಿ ರಾಜ್ಯದಲ್ಲಿ ಗ್ರಾಹಕರ ಕಾಯಿದೆಯನ್ವಯ ದಾಖಲಾದ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು ; ಇತ್ಯರ್ಥಪಡಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಗ್ರಾಹಕರ ಕಾಯಿದೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಗ್ರಾಹಕರ ಕಾಯಿದೆ ನ್ಯಾಯಾಲಯಗಳನ್ನು ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಲು ಸರ್ಕಾರದ ಕ್ರಮ ಕೈಗೊಳ್ಳುವುದೇ ; ಕೈಗೊಳ್ಳದಿರಲು ಕಾರಣವೇನು ; ಪ್ರಸ್ತುತ ನ್ಯಾಯಾಲಯದಲ್ಲಿ ಖಾಲಿಯಿರುವ ಅಧ್ಯಕ್ಷರ ಮತ್ತು ಸದಸ್ಯರುಗಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಈ) ಅಂತರ್ಜಾಲ ಮುಖಾಂತರ ಖರೀದಿಸುವ ವಸ್ತುಗಳಲ್ಲಿ ಗ್ರಾಹಕರಿಗೆ ಮೋಸ ಮಾಡುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಇಲಾಖೆ ಕ್ರಮ ಕೈಗೊಂಡಿದೆಯೇ ; (ವಿವರ ನೀಡುವುದು)

(ಉ) ಗ್ರಾಹಕರ ಕಾಯಿದೆ ಮತ್ತು ಹಕ್ಕುಗಳ ಬಗ್ಗೆ ಮಾಹಿತಿಯ ಕೊರತೆಯಿಂದ ಪ್ರಕರಣಗಳು ಬೆಳಕಿಗೆ ಬರುವುದಿಲ್ಲ ಎಂಬ ದೂರುಗಳಿದ್ದು, ಇದಕ್ಕೆ ಇಲಾಖೆ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ಕೊಂಕಣಿ ಭವನ ಸ್ಥಾಪಿಸುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮ ನಿರ್ದೇಶನ ಹೊಂದಿದವರು) :–**

೫೦೦ (೬೩೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಂಕಣಿ ಅಕಾಡೆಮಿಗೆ "ಕೊಂಕಣಿ ಭವನ" ಸ್ಥಾಪನೆಗೆ ನೀಡಲಾದ ಪ್ರಸ್ತಾವನೆ ಯಾವ ಹಂತದಲ್ಲಿದೆ ; ಸ್ಥಳ ಒದಗಿಸಲಾಗಿದೆಯೇ ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಛೇರಿಯ ಬಾಡಿಗೆ ಎಷ್ಟು; ಅಕಾಡೆಮಿಯ ಸದಸ್ಯರುಗಳಿಗೆ ತಿಂಗಳೊಂದಕ್ಕೆ ಕನಿಷ್ಠ ರೂ ೧೦,೦೦೦/– ಗೌರವಧನ ನೀಡಬೇಕೆಂಬ ಬೇಡಿಕೆಯನ್ನು ನಿರ್ವಹಿಸದೇ ಇರಲು ಕಾರಣವೇನು ; (ವಿವರ ನೀಡುವುದು)

(ಆ) ೨೦೧೬–೧೭, ೨೦೧೭–೧೮ ರಲ್ಲಿ ಕೊಂಕಣಿ ಅಕಾಡೆಮಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ; ಖರ್ಚು ಮಾಡಿದ ಹಣವೆಷ್ಟು ; (ವಿವರ ನೀಡುವುದು)

(ಇ) ಕೊಂಕಣಿ ೩ನೇ ಭಾಷೆಯಾಗಿ ಶಾಲಾ–ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ಇಲಾಖೆಯಿಂದ ಎಷ್ಟು ಶಿಕ್ಷಕರನ್ನು ನೇಮಕ ಮಾಡಲಾಗಿದೆ ; (ವಿವರ ನೀಡುವುದು)

(ಈ) ಪಿಯುಸಿ ಹಂತದಲ್ಲಿ ಕೊಂಕಣಿ ಭಾಷೆಯನ್ನು ಅಧ್ಯಯನ ಮಾಡಲು–ಸಿಲೆಬೆಸ್‌ನ್ನು (ಪಠ್ಯಕ್ರಮ) ತಯಾರಿಸಲಾಗಿದೆಯೇ; ಈ ಬೇಡಿಕೆಯನ್ನು ಇಲಾಖೆಯು ಗಮನಿಸದೇ ಇರಲು ಕಾರಣ ಏನು ? (ವಿವರ ನೀಡುವುದು)

## ಸಾಮೂಹಿಕ ಆರೋಗ್ಯ ಯೋಜನೆಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮ ನಿರ್ದೇಶನ ಹೊಂದಿದವರು) :–**

೫೦೧ (೬೩೪) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರ ಸಾಮೂಹಿಕ ಆರೋಗ್ಯ ಯೋಜನೆಯನ್ನು ( Universal Health Scheme) ನ್ನು ಜಾರಿಗೆ ತರಲು ಉದ್ದೇಶಿಸಿದೆಯೇ; ಇದನ್ನು ಎಂದು ಜಾರಿಗೊಳಿಸುವುದು; ಈ ಯೋಜನೆಗೆ ತಗಲುವ ಒಟ್ಟು ವಾರ್ಷಿಕ ವೆಚ್ಚ ಎಷ್ಟು ; ಈ ಯೋಜನೆಯು ವಿಳಂಬವಾಗಲು ಕಾರಣವೇನು ; (ವಿವರ ಒದಗಿಸುವುದು)

(ಆ) ರಾಜ್ಯದಲ್ಲಿ ಎಷ್ಟು ಸಮುದಾಯ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ನಿರ್ಧರಿಸಿದೆ ; (ವಿವರ ಒದಗಿಸುವುದು)

(ಇ) ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಇಲಾಖೆ ಕೈಗೊಂಡಿರುವ ಕ್ರಮಗಳೇನು ; (ವಿವರ ಒದಗಿಸುವುದು)

(ಈ) ಖಾಸಗಿ ಆಸ್ಪತ್ರೆಗಳಲ್ಲಿ ಈ ಯೋಜನೆಯಡಿಯಲ್ಲಿ ಚಿಕಿತ್ಸೆ ಪಡೆಯಲು ಅವಕಾಶವಿದೆಯೇ ; (ವಿವರ ಒದಗಿಸುವುದು)

(ಉ) ದಕ್ಷಿಣ ಕನ್ನಡ ಜಿಲ್ಲೆಯ ಬಜ್ಪೆ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವಲ್ಲಿ ವಿಳಂಬವಾಗಿರುವುದಕ್ಕೆ ಕಾರಣವೇನು ; ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ ? (ವಿವರ ಒದಗಿಸುವುದು)

## ಇಂದಿರಾ ಕ್ಯಾಂಟೀನ್ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮ ನಿರ್ದೇಶನ ಹೊಂದಿದವರು) :–**

೫೦೨ (೬೩೩) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಇಂದಿರಾ ಕ್ಯಾಂಟೀನ್ ಮೂಲಕ ದಿನವೊಂದಕ್ಕೆ ಎಷ್ಟು ಮಂದಿಗೆ ಬೆಳಗಿನ ಉಪಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟ ಈ ದಿನದವರೆಗೆ ಒದಗಿಸಲಾಗುತ್ತಿದೆ ; (ವಿವರ ಒದಗಿಸುವುದು)

(ಆ) ರಾಜ್ಯದಲ್ಲಿ ಈವರೆಗೆ ಎಷ್ಟು ಇಂದಿರಾ ಕ್ಯಾಂಟೀನ್‌ನನ್ನು ನಿರ್ಮಿಸಲಾಗಿದೆ ; ಓರ್ವ ವ್ಯಕ್ತಿಗೆ ಮೂರು ಹೊತ್ತಿನ ತಿಂಡಿ–ಊಟಕ್ಕೆ ತಗಲುವ ವೆಚ್ಚವೆಷ್ಟು; ; (ವಿವರ ಒದಗಿಸುವುದು)

(ಇ) ಗ್ರಾಮಾಂತರ ಭಾಗಗಳಲ್ಲಿ ಇಂದಿರಾ ಕ್ಯಾಂಟೀನ್‌ನನ್ನು ತೆರೆಯಲು ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ ; (ವಿವರ ಒದಗಿಸುವುದು)

(ಈ) ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ತಯಾರಿಕೆಯನ್ನು ಯಾವ ಆಧಾರದಲ್ಲಿ ಗುತ್ತಿಗೆ ನೀಡಲಾಗಿದೆ ? (ವಿವರ ಒದಗಿಸುವುದು)

## ಕೂರ್ಗಹಳ್ಳಿ ಅಂಗನವಾಡಿ ಕೇಂದ್ರಕ್ಕೆ ಹೋಗುವ ರಸ್ತೆಗಳಿಗೆ ಬೇಲಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳಿಯ ಸಂಸ್ಥೆಗಳ ಕ್ಷೇತ್ರ):–**

೫೦೩ (೬೭೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ತಾಲ್ಲೂಕು ಕೂರ್ಗಹಳ್ಳಿ ಅಂಗನಾವಾಡಿ ಕೇಂದ್ರ ಸುತ್ತಲೂ ಇರುವ ಸಂಬಂಧಿಸಿದ ವ್ಯಾಜ್ಯಗಳ ಕಾರಣ ಸುತ್ತಲೂ ತಂತಿ ಬೇಲಿಯನ್ನು ನಿರ್ಮಿಸಿ, ಮಕ್ಕಳ ಪಾಲಕರು ಮತ್ತು ಸಿಬ್ಬಂದಿ ಓಡಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಬಗ್ಗೆ ಪರಿಶೀಲಿಸಿ ಮಕ್ಕಳ ಮತ್ತು ಸಿಬ್ಬಂದಿ ನಿರಾತಂಕವಾಗಿ, ತೊಂದರೆ ಇಲ್ಲದೆ ಓಡಾಡಲು ರಸ್ತೆಯನ್ನು ಕಲ್ಪಿಸಿಕೊಡಲಾಗುವುದೇ, ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗುವುದೇ ?

## ನಂದಿನಾಥಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿ ಕೊರತೆ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳಿಯ ಸಂಸ್ಥೆಗಳ ಕ್ಷೇತ್ರ):–**

೫೦೪ (೬೭೪) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕು, ನಂದಿನಾಥಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಎಷ್ಟು ಹಳ್ಳಿಗಳು ಹಾಗೂ ಜನ ಸಂಖ್ಯೆ ಒಳಪಡುತ್ತದೆ. ಸರಾಸರಿ ಪ್ರತಿದಿನ ಈ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆ ಎಷ್ಟು; ಈ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ ಮತ್ತು ಹಾಲಿ ಸೇವೆ

ಸಲ್ಲಿಸುತ್ತಿರುವ ವೈದ್ಯಕೀಯ ಮತ್ತು ಖಾಲಿ ಇರುವ ವೈದ್ಯಕೀಯ ಮತ್ತು ವೈದ್ಯಕೀಯೇತರ ಸಿಬ್ಬಂದಿ ಸಂಖ್ಯೆ ಎಷ್ಟು ;

(ಆ) ಖಾಲಿ ಇರುವ ವೈದ್ಯಕೀಯ ಮತ್ತು ವೈದ್ಯಕೀಯೇತರ ಸಿಬ್ಬಂದಿ ವರ್ಗದವರನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು.

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0302/800 ಪ್ರತಿಗಳು/15–02–2018